ಅರ್ಥ :- ಯಾವ ಪುರುಷನು ಯಾವುದೋ ಭಯದ ನಿಮಿತ್ತ, ನೆಪ ಹೇಳಿ ರಾಜ, ಭೂತ, ಪಿಶಾಚಿಗಳ ಧನಸಂಪತ್ತಿಯನ್ನು ಅಪಹರಿಸುವನೋ ಅಥವಾ ಅನ್ಯರನ್ನು ಯಾವುದಾದರೊಂದು ನಿಮಿತ್ತದಿಂದ ಅವರವರ ಮನೆಯಿಂದ ಹೊಡೆದು-ಬಡಿದು ಹೊರದೋಡಿಸುವನೋ ಆ ಜೀವನು ಮರಣಾನಂತರ ಮುಂದಿನ ಭವದಲ್ಲಿ ಜನಿಸಿ ಸದಾಕಾಲವೂ ಭಯವಿಹ್ವಲ ನಾಗಿರುತ್ತಾನೆ.

ಭಾವಾರ್ಥ :- ಯಾವ ಮಾನವನು ಯಾವ ವಿಧವಾದ ಪಾಪವನ್ನು ಮಾಡುತ್ತಿರಲಿ; ಆತನು ಪ್ರತಿ ಸಮಯದಲ್ಲೂ ತಾನು ಮಾಡಿದ ಪಾಪದ ಭಯದಿಂದ ಭಯ-ಭೀತನಾಗಿರುತ್ತಾನೆ. ಸರ್ವರಿಗೂ ಭಯ ತೋರಿಸಿ ಅವರ ಸಂಪತ್ತಿಯನ್ನು ದೋಚುವನೋ ಅತನ ಬೆನ್ನನ್ನು ಭಯವು ಬಿಡುವುದಿಲ್ಲ, ಇದೇ ಪ್ರಕಾರವಾಗಿ ಭೂತ, ಪಿಶಾಚಿಗಳ ಧನವನ್ನು ಅಪಹರಿಸುವುದೂ ಕೂಡಾ ಪಾಪಕ್ಕೆ ಕಾರಣೀಭೂತವಾಗಿರುತ್ತದೆ. ಆದರೆ ಭೂತ-ಪಿಶಾಚಿಗಳ ಸ್ವಂತ ಯಾವ ಧನಸಂಪತ್ತಿಯೂ ಇರುವುದಿಲ್ಲವು. ಅವುಗಳಿಗೆ ಯಾವ ಧನಸಂಪತ್ತಿಯ ಆವಶ್ಯಕತೆ ಕೂಡಾ ಇರುವುದಿಲ್ಲ, ಭೂತ-ಪಿಶಾಚಿಗಳು ವ್ಯಂತರ ಜಾತಿಯ ದೇವತೆಗಳು. ಅವುಗಳಿಗೆ ಹೊಟ್ಟೆ ಹಸಿವೆಯಾಗದು. ಅವರ ಕಂಠದಿಂದ ಕರಗುವ ಅಮೃತವನ್ನು ಪಾನಮಾಡಿ ಸಂತೃಪ್ತರಾಗುತ್ತಾರೆ. ಆದರೆ ಯಾವ ಕೃಪಣ ಮನುಷ್ಯನು ತನ್ನ ಧನವನ್ನು ಧಾರ್ಮಿಕ ಕಾರ್ಯಗಳಲ್ಲಿ ಅಥವಾ ಆಹಾರ-ಪಾನೀಯಗಳಿಗಾಗಲೀ ಉಪಯೋಗಿಸುವುದಿಲ್ಲವೋ ಆತ ಯಾವುದೋ ಜನ್ಮದ ಪುಣ್ಯಕಾರ್ಯ, ಕರ್ಮದ ನಿಮಿತ್ತದಿಂದಲೋ ವ್ಯಂತರ ದೇವನಾಗಿ ಜನಿಸುವನು. ಅದೇ ಜೀವನು ತಾನು ಪೂರ್ವ ಜನ್ಮದಲ್ಲಿ ಸಂಪಾದಿಸಿಟ್ಟ ಧನ ಸಂಪತ್ತಿಯ ರಕ್ಷಣೆ ಮಾಡಿಕೊಂಡಿರುತ್ತಾನೆ. ಅಂತಹ ಧನವನ್ನು ವ್ಯಂತರ ದೇವತೆಗಳ ಧನಸಂಪತ್ತಿಯೆಂದು ಸಂಬೋಧಿಸುವುದು. ಆ ಧನವನ್ನು ಯಾರು ಅಪಹರಿಸುವರೋ ಅವರು ಈ ಜನ್ಮದಲ್ಲಿ ಸದಾಕಾಲವೂ ಭಯ-ಭೀತರಾಗಿರುತ್ತಾರೆ. ಹೀಗೆ ಕ್ರಮೇಣ ಮರಣವನ್ನು ಹೊಂದಿ ಪರಲೋಕದಲ್ಲಿಯೂ ಸಹ ಭಯವಿಹ್ವಲನಾಗಿರುತ್ತಾನೆ. ಇದೇ ಪ್ರಕಾರವಾಗಿ ಯಾವನು ಪಾಪಪಟ್ಟ ಕುಟುಂಬದವನನ್ನು, ಆತನ ಮನೆಯಿಂದ ಹೊಡೆದೋಡಿಸುವನೋ ಅಂಥವನನ್ನು ಕೂಡಾ ಮರಣಾನಂತರ ಸದಾಕಾಲ ಹೆದರಿಕೆಯು ಬಿಡುವುದಿಲ್ಲವು. ಈ ಸಂಸಾರದಲ್ಲಿ ಅನೇಕ ವಿಧವಾದ ಪಕ್ಷಿಗಳು, ಪಶುಗಳು ಯಾವಾಗಲೂ ಭಯದಿಂದಲೇ ಜೀವಿಸಿಕೊಂಡಿರುತ್ತವೆ. ಜಿಂಕೆಗಳು, ಪಾರಿವಾಳಗಳು ಇದೇ ಸ್ವಭಾವದವುಗಳೆಂದು ಸ್ಪಷ್ಟವಾಗುತ್ತವೆ. ಇಂತಹ ವಿಷಯಗಳನ್ನು ತಿಳಿದ ಪಾಪಭೀರುಗಳಾದ ಭವ್ಯಾತ್ಮರು ಯಾರಿಗೂ ಭಯಪಡಿಸುವುದಾಗಲೀ, ಬಲಾತ್ಕಾರ ಪೂರ್ವಕ ದ್ರವ್ಯಾದಿಗಳನ್ನು ಕಿತ್ತುಕೊಳ್ಳುವುದಾಗಲೀ, ಮಾಡದಿರುವುದೇ ಆತ್ಮಕಲ್ಯಾಣದ ಸುಲಭೋಪಾಯವಾಗಿರುತ್ತದೆ.



ಇನ್ನು ಮುಂದಕ್ಕೆ ಅಶಕ್ತನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾ -
ಜ್ಜೀವೋ ಭವೇದ್ಬಾಲ್ಯಭವೇ ಹ್ಯಶಕ್ತಃ ॥

ಅರ್ಥ :- ಹೇ ದಯಾನಿಧೇ ! ಈ ಜೀವನು ಯಾವ ಪಾಪಕರ್ಮದ ಫಲವಾಗಿ ಬಾಲ್ಯದಿಂದಲೇ ಅಶಕ್ತನಾಗಿರುತ್ತಾನಲ್ಲ, ಅದರ ಕಾರಣವನ್ನು ದಯವಿಟ್ಟು ಹೇಳಬೇಕು.

ಉತ್ತರ :- ನಿರ್ದೋಷ ಜಂತೋರ್ವಸನಾನ್ನಪಾನಂ ।
ರುಂಧ್ವಾ ತಥಾ ಹಿಂಸನಮೇವ ಕೃತ್ವಾ ॥
ಬಧ್ವಾಹ್ಯತುಷ್ಯದ್ ಭುವಿ ಹೀನ ಜಂತೂನ್ ।
ಮೃತ್ವಾ ಸ ದುಷ್ಟಶ್ಚ ಭವೇದಶಕ್ತಃ ॥ ೨೨ ॥

ಅರ್ಥ :- ಯಾವ ಪುರುಷನು ನಿರ್ದೋಷಿ ಜೀವಗಳ ವಸ್ತ್ರ, ಅನ್ನ, ಪಾನಾದಿಗಳನ್ನು ಅಪಹರಿಸುವನೋ ಅಥವಾ ನಿರ್ದೋಷಿಗಳನ್ನು ಹೊಡೆದು-ಬಡಿದು ಸಂತೋಷಪಡುವನೋ ಅಥವಾ ಸೂಕ್ಷ್ಮ-ಸೂಕ್ಷ್ಮ ಜೀವಗಳನ್ನು ಕಟ್ಟಿಹಾಕಿ, ಅವು ದುಃಖಪಡುತ್ತಿರುವುದನ್ನು, ಅವುಗಳ ಕೂಗನ್ನು ಕೇಳಿ ಸಂತೋಷಪಡುವನೋ, ಅಂತಹ ಜೀವನು ಸತ್ತು ಪರಲೋಕದಲ್ಲಿ ಮಹಾ ನೀಚನಾಗಿಯೂ, ಅಶಕ್ತನಾಗಿಯೂ ಜನಿಸುವನು.

ಭಾವಾರ್ಥ :- ನಿರ್ದೋಷಿಗಳ ಮತ್ತು ಅಶಕ್ತ ಜೀವಗಳ ಅನ್ನ ಪಾನಾದಿಗಳನ್ನು ಕಿತ್ತುಕೊಳ್ಳುವುದು ಮಹಾ ಪಾಪಕಾರ್ಯವಾಗಿರುತ್ತದೆ.

ಆದರೆ ಅಸಮರ್ಥ ಜೀವಗಳಿಂದ ಯಾವ ಪ್ರತೀಕಾರವೂ ಸಿದ್ಧಿಸಲಾರದು. ಆದರಿಂದ ಅವು ಅಸಮರ್ಥರಾಗಿರುವುದರಿಂದ ಸದಾ ದುಃಖಿಗಳಾಗಿರುತ್ತವೆ. ಅವನ್ನು ಪೀಡಿಸುವುದರಿಂದ ಮಹಾ ಪಾಪವೆಂದೆನ್ನಿಸಿಕೊಳ್ಳುವುದು. ಇದೇ ರೀತಿಯಾಗಿ ಅಸಮರ್ಥ ಜೀವಗಳನ್ನು ಹೊಡೆಯುವುದು, ಗೂಡಿನಲ್ಲಿಡುವುದು, ಸರಪಣಿ, ಹಗ್ಗ ಮೊದಲಾದವುಗಳಿಂದ ಬಂಧಿಸಿ ಬಂಧನದಲ್ಲಿಡುವುದು ಕೂಡಾ ಘೋರ ಪಾಪದ ಕಾರ್ಯವಾಗಿರುತ್ತದೆ. ಸ್ವಾತಂತ್ರದಿಂದ ಸ್ವಚ್ಛಂಧವಾಗಿ ಆಕಾಶದಲ್ಲಿ ಸಂಚರಿಸುತ್ತಾ ಆನಂದಪಡುವಪಕ್ಷಿ ಚಿನ್ನದ ಪಂಜರ (ಗೂಡು) ದಲ್ಲಿ ಇಟ್ಟು ಉತ್ತಮ ಆಹಾರವೀಯುತ್ತಿದ್ದರೂ ಕಾರಾಗೃಹದಲ್ಲಿ ಸಿಲುಕಿದ ಮಾನವನಂತೆ ಅಸಹ್ಯ ದುಃಖವನ್ನನುಭವಿಸುತ್ತವೆ. ಆ ಪಾಪಕರ್ಮದ ಉದಯದಿಂದ ಜೀವಗಳು ಮರಣವನ್ನು ಹೊಂದಿ ಅಸಮರ್ಥ ಮತ್ತು ಅಶಕ್ತರಾಗಿಯೇ ಜನಿಸುವುವು. ಪೂರ್ವ ಜನ್ಮದಲ್ಲಿ ಯಾವ ಜೀವಗಳನ್ನು ಬಂಧನದಲ್ಲಿಟ್ಟಿದ್ದನೋ, ಹೊಡೆದಿದ್ದನೋ, ಕೊಲೆಗೈದಿದ್ದನೋ, ಆದೇ ಜೀವಗಳು ಅಸಮರ್ಥ ಮತ್ತು ಅಶಕ್ತರಾಗಿ ಜನಿಸಿರುವ ಜೀವಗಳನ್ನು ಬಂಧಿಸಿ, ಹೊಡೆದು-ಬಡಿದು ಕಷ್ಟವನ್ನುಂಟುಮಾಡುತ್ತವೆ. ಈ ವಿಷಯವನ್ನು ತಿಳಿದು, ಚಿಂತಿಸಿ ಯಾವುದೇ ಅಸಮರ್ಥ ಜೀವಗಳಿಗೆ ಕಷ್ಟ, ತೊಂದರೆಯನ್ನುಂಟು ಮಾಡಬಾರದು. ಇದು ಶಾಂತಿ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಕೃಪಣನಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ಕಸ್ಮಾ-
ನ್ಮೃತ್ವೇತಿ ಜೀವಃ ಕೃಪಣೋ ಭವೇತ್ಕಾ ॥

ಅರ್ಥ :- ಹೇ ಪ್ರಭೋ ! ಯಾವ ಪಾಪಕರ್ಮದ ಉದಯದಿಂದ ಈ ಜೀವನು ಮರಣಾನಂತರ ಕೃಪಣನಾಗಿ ಜನಿಸುವನು ?

ಉತ್ತರ :- ವಿಘ್ನಾನಿ ದಾನೇ ಕರಣಾನ್ನಿರೋಧಾದ್ ।
ಧರ್ಮೇ ಧನಾದಿ ವ್ಯಯಕೃತ್ತುರೇವ ॥
ಧನಾರ್ಜನೇ ಹ್ಯೇವ ವಿಶೇಷ ಲೋಭಾ-।
ನ್ಮೃತ್ವಾ ಸ ಮರ್ತ್ಯಃ ಕೃಪಣೋ ಭವೇತ್ಕಾ ॥ ೨೩ ॥



ಅರ್ಥ :- ಯಾರು ದಾನಮಾಡುವಾಗ ನಾನಾ ವಿಘ್ನಗಳನ್ನುಂಟು ಮಾಡುವನೋ ಧಾರ್ಮಿಕ ಕಾರ್ಯಗಳಿಗಾಗಿ ಧನವನ್ನು ವ್ಯಯಮಾಡುವಾಗ ತಡೆಹಿಡಿಯುವನೋ ಅಥವಾ ಹಣ ಸಂಪಾದನೆಯಲ್ಲಿ ದುರಾಸೆಯನ್ನಿಟ್ಟು ಕೊಂಡು ಸಾಯುವ ಮಾನವನು ಈ ಭೂಮಿಯಲ್ಲಿಯೇ ಮಹಾ ಕೃಪಣ, ದುರ್ಲೋಭಿಯಾಗಿಯೇ ಜನಿಸುವನು.

ಭಾವಾರ್ಥ :- ತನ್ನಾತ್ಮನ ಉಪಕಾರ ಮತ್ತು ಕಲ್ಯಾಣಕ್ಕಾಗಿಯೂ, ಅನ್ಯ ತಪಸ್ವಿಗಳ ಆತ್ಮೋದ್ಧಾರಕ್ಕಾಗಿಯೂ, ತ್ಯಾಗಮಾಡುವುದಕ್ಕೆ ದಾನವೆಂದು ಹೇಳುತ್ತಾರೆ. ನಿರ್ಗ್ರಂಥ ಗುರುಗಳು ಉತ್ತಮ ಪಾತ್ರರು. ಅವರಿಗೆ ಆಹಾರಾದಿ ದಾನವನ್ನೀಯುವುದು ಶ್ರೇಷ್ಠ ದಾನವೆಂದೆನ್ನಿಸಿಕೊಳ್ಳುವುದು. ಸಮ್ಯಗ್ದೃಷ್ಟೀ ಶ್ರಾವಕರು ಮಧ್ಯಮ ಪಾತ್ರವೆಂದೂ ಮತ್ತು ಅವಿರತ ಸಮ್ಯಗ್ದೃಷ್ಟಿಗಳು ಜಘನ್ಯ ಪಾತ್ರವೆಂದೂ, ಇವರಿಗೆ ದಾನವೀಯುವುದು ಮಧ್ಯಮ ಪಾತ್ರದಾನವಾಗಿರುತ್ತದೆ. ಇವರಲ್ಲದೆ ದುಃಖೀ ಜೀವಗಳಿಗೆ ಭೋಜನಾದಿಗಳನ್ನು ಕೊಡುವುದು ಕರುಣಾದಾನವೆಂದೆನ್ನಿಸಿಕೊಳ್ಳುತ್ತದೆ. ಶ್ರಾವಕ ವರ್ಗವು ತಮ್ಮ-ತಮ್ಮಲ್ಲಿ ಆದಾನ ಪ್ರದಾನಮಾಡುವ ವ್ಯವಹಾರಕ್ಕೆ ಸಮಾನದಾನವೆಂದು ಹೇಳುತ್ತಾರೆ. ಇವೆಲ್ಲವು ಉತ್ತಮವೆಂದೇ ಹೇಳಿಸಿಕೊಳ್ಳುತ್ತವೆ. ಇವುಗಳಲ್ಲದೆ ಜಿನಾಲಯ ನಿರ್ಮಾಪಣೆ, ಜಿನಪ್ರತಿಮೆ, ತೀರ್ಥಕ್ಷೇತ್ರ, ಧಾರ್ಮಿಕ ಶಿಕ್ಷಾಭ್ಯಾಸ ಮೊದಲಾದ ಸತ್ಕಾರ್ಯಗಳಿಗಾಗಿ ದಾನಮಾಡುವುದು ಕೂಡಾ ಉತ್ತಮ ದಾನವಾಗಿರುತ್ತದೆ. ಮತ್ತು ಭಾರತ ವರ್ಷದ ಸಭ್ಯತೆಯನ್ನು ನೆಲೆನಿಲ್ಲಿಸುವ ವಿದ್ಯಾಭ್ಯಾಸಕ್ಕಾಗಿ ಧನಾದಿಗಳನ್ನು ಸದ್ವಿನಿಯೋಗಿಸುವುದು ಕೂಡಾ ಶ್ರೇಷ್ಠ ದಾನವೇ ಆಗಿರುತ್ತದೆ. ಇಂತಹ ಶ್ರೇಷ್ಠ ದಾನಗಳಲ್ಲಿಯೂ, ಪಾತ್ರದಾನದಲ್ಲಿಯೂ, ವಿಘ್ನಗೈಯುವವನು ತನ್ನ ಮರಣಾನಂತರ ಪರಲೋಕದಲ್ಲಿ ಜನಿಸಿ ಮಹಾ ಕೃಪಣನಾಗಿಯೇ ಜನಿಸುವನು. ಯಾರಾದರೊಬ್ಬ ಐಶ್ವರ್ಯವಂತನು ಜಿನಮಂದಿರಗಳನ್ನು ಕಟ್ಟಿಸುವುದು, ಪಂಚಕಲ್ಯಾಣ ಮಹೋತ್ಸವ ಮಾಡಿಸಲು ಉದ್ಯುಕ್ತನಾಗುವಾಗ ಆ ಕಾರ್ಯಗಳಲ್ಲಿ ವಿಘ್ನಮಾಡುವ, ತೊಂದರೆಯನ್ನುಂಟುಮಾಡುವವನು ಮರಣಾನಂತರ ಮಹಾ ಕೃಪಣನಾಗಿಯೇ ಜನಿಸುವನು. ಮತ್ತೆ ಧನಸಂಪಾದನೆಯ ಕಾರ್ಯದಲ್ಲಿ ಅತ್ಯಂತ ಲೋಭ ಕಾಣಿಸುವನೋ, ಅಂತಹವನು ಸತ್ತು ಕೃಪಣ,

ಲೋಭಿಯಾಗಿಯೇ ಜನಿಸುವನು. ಆದ್ದರಿಂದ ಉತ್ತಮ ದಾನದಲ್ಲಿ ಯಾರೂ ವಿಘ್ನವೆಸಗಬಾರದು. ಧಾರ್ಮಿಕ ಕಾರ್ಯಗಳು ನಿಂತುಹೋಗುವುದಕ್ಕಾಗಿ ಪ್ರಯತ್ನಿಸಬಾರದು. ಸಾಧ್ಯವಾದಷ್ಟು ಸತ್ಯ-ನ್ಯಾಯಪೂರ್ವಕ ಧನಸಂಪಾದನೆ ಮಾಡುತ್ತಾ ದಾನ-ಧರ್ಮಗಳನ್ನು ಮಾಡುವುದೇ ಆತ್ಮಶಾಂತಿಯ ಮಾರ್ಗವಾಗಿರುತ್ತದೆ.

ಮುಂದಕ್ಕೆ ಮೂರ್ಖನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ! ಕಸ್ಮಾದ್ ।
ಜೀವೋಽತ್ರಲೋಕೇ ಭವತೀಹ ಮೂರ್ಖಃ ॥

ಅರ್ಥ :- ಹೇ ಸ್ವಾಮಿನ್ ! ಕೃಪೆದೋರಿ ಈ ಜೀವನು ಯಾವ ಪಾಪ ಕರ್ಮದ ಉದಯದಿಂದ ಮೂರ್ಖನಾಗಿ ಜನಿಸುವನೆಂಬುದನ್ನು ಅಪ್ಪಣೆ ಕೊಡಿಸಬೇಕು.

ಉತ್ತರ :- ಶಾಸ್ತ್ರಸ್ಯ ನಿಂದಾ ವಿದೂಷಾಂ ಕೃತಾ ವಾ ।
ಚಿತ್ತಂ ಸುವಿದ್ಯಾಪಠನೇ ನ ದತ್ತಂ ॥
ಯೇನಾಪ ಮಾನಃ ಸುಗುರೋಃ ಕೃತಃ ಕೌ ।
ಮೃತ್ವಾ ಸ ಮೂರ್ಖೋ ಭವತಿ ಹ್ಯಭಾಗ್ಯಃ ॥ ೨೪ ॥

ಅರ್ಥ :- ಯಾವ ಮನುಜನು ಸರ್ವಜ್ಞ ಜಿನೇಂದ್ರದೇವನಿಂದ ಉಪದೇಶಿಸಲ್ಪಟ್ಟ ಶಾಸ್ತ್ರಗಳನ್ನು ನಿಂದಿಸುವನೋ, ಜಿನಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರಾದ ವಿದ್ವಾಂಸರನ್ನು ನಿಂದಿಸುವನೋ, ಶಾಸ್ತ್ರಗ್ರಂಥಗಳ ಪಠಣ-ಪಾಠಣ ಕಾರ್ಯದಲ್ಲಿ ಅಶ್ರದ್ಧೆಯನ್ನು ತೋರಿಸುವನೋ ಮತ್ತು ಸರ್ವಸಂಘ ಪರಿತ್ಯಾಗಿಗಳಾದ ನಿರ್ಗ್ರಂಥ ಗುರುಗಳನ್ನು ಧಿಕ್ಕರಿಸಿ ಅಪಮಾನಿಸುವ ನಿರ್ಭಾಗ್ಯನು ಸತ್ತು ಮಹಾ ಮೂರ್ಖ(ಅಜ್ಞಾನಿ)ನಾಗಿಯೇ ಜನಿಸುವನು.

ಭಾವಾರ್ಥ :- ಈ ಸಂಸಾರದಲ್ಲಿ ಆತ್ಮಜ್ಞಾನಿಗಳಿಗೆ ಮೋಕ್ಷಲಕ್ಷ್ಮಿಯು ಪ್ರಾಪ್ತಿಯಾಗುವುದು. ಜಿನೇಂದ್ರ ದೇವನಿಂದ ಉಪದೇಶಿಸಲ್ಪಟ್ಟ ಸಿದ್ಧಾಂತ ಶಾಸ್ತ್ರಗಳಿಂದಲೇ ಆತ್ಮನ ಯಥಾರ್ಥ ಸ್ವರೂಪದ ಪರಿಜ್ಞಾನವಾಗುವುದು. ಹಾಗೆ



ಆ ಶಾಸ್ತ್ರಗಳ ಅನುಸಾರವಾಗಿ ಆತ್ಮನ ಯಥಾರ್ಥ ಸ್ವರೂಪವನ್ನು ವರ್ಣಿಸುವ ವಿದ್ವಾಂಸರ ಧರ್ಮೋಪದೇಶದಿಂದಲೂ ಕೂಡಾ ಆತ್ಮನ ಯಥಾರ್ಥ ಪರಿಜ್ಞಾನವಾಗುವುದು. ಅಧ್ಯಾತ್ಮಶಾಸ್ತ್ರಗಳ ಪಠಣ-ಪಾಠಣದಿಂದಲೂ ಆತ್ಮಜ್ಞಾನವುಂಟಾಗುವುದು. ಹಾಗೆ ವೀತರಾಗ ನಿರ್ಗ್ರಂಥ ಪರಮ ಗುರುಗಳು ತಮ್ಮ ಪರಮ ಪ್ರಶಾಂತ ಮುದ್ರೆಯಿಂದಲೇ ಮೋಕ್ಷಮಾರ್ಗದ ಸ್ವರೂಪವನ್ನು ತೋರಿಸಿಕೊಡುತ್ತಿರುತ್ತಾರೆ. ಹೀಗೆ ಜಿನಶಾಸ್ತ್ರ, ವಿದ್ವಾಂಸರ ಅಧ್ಯಾತ್ಮಶಾಸ್ತ್ರಗಳ ಪಠಣ-ಪಾಠಣಕ್ರಿಯೆ ಮತ್ತು ವೀತರಾಗ ನಿರ್ಗ್ರಂಥ ಇವೆಲ್ಲವು ಮೋಕ್ಷಕ್ಕೆ ಕಾರಣೀಭೂತವಾಗಿವೆ. ಅವುಗಳ ಅಪಮಾನ, ನಿಂದೆ ಮತ್ತು ಅವಿನಯಾದಿಗಳನ್ನು ಮಾಡುವ ಮಾನವನು ಸತ್ತು ನಿಜವಾಗಿಯೂ ಭಾಗ್ಯಹೀನನಾಗಿಯೂ ಮಹಾ ಅಜ್ಞಾನಿಯಾಗಿಯೂ ಜನಿಸುವನು. ಇಂತಹ ಅನುಚಿತ ಕಾರ್ಯಗಳಿಂದ ದೂರವಿರುವುದೇ ಆತ್ಮಕಲ್ಯಾಣದ ಸುಗಮ ಮಾರ್ಗವಾಗಿರುತ್ತದೆ.

ಮುಂದಕ್ಕೆ ಪರಾಧೀನತೆ (ಪರತಂತ್ರತೆ)ಗೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಿನ್ ಕುಕಾರ್ಯೇ ಚ ಕೃತೇ ಸದಾಯಂ ।
ಜೀವೋ ಭವೇದೇವ ಪರಾಶ್ರಯಃ ಕೌ ॥

ಅರ್ಥ :- ಹೇ ಭಗವಾನ್ ! ಈ ಸಂಸಾರೀ ಜೀವನು ಯಾವಯಾವ ದುಷ್ಕೃತ್ಯಗಳನ್ನು ಮಾಡಿರುವುದರ ಫಲವಾಗಿ ಪರತಂತ್ರನಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಧೃತ್ವಾತಿ ದೀನಾನಪರಾಧ ಮುಕ್ತಾನ್ ।
ಸ್ವಸ್ಥಾನ್ ಬಲಾದ್ಬಂಧಿಗೃಹೇ ನಿಪಾತ್ಯ ॥
ರುಧ್ವಾನ್ನಪಾನಂ ಚ ತತೋ ಹ್ಯತುಷ್ಯತ್ ।
ಪರಾಶ್ರಯಃ ಸ್ಯಾನ್ಮನುಜಃ ಸ ಮೃತ್ವಾ ॥ ೨೫ ॥

ಅರ್ಥ :- ಯಾವ ಮನುಷ್ಯನು ದೀನರನ್ನು, ಪರತಂತ್ರತೆಯಲ್ಲಿ ಸಿಲುಕಿ ಕಷ್ಟಪಡುವವರನ್ನು ಬಂಧಿಸಿ ಕಾರಗೃಹದಲ್ಲಿಟ್ಟು ಅನ್ನಪಾನಾದಿಗಳನ್ನೀಯದೆ, ದುಃಖಪಡುತ್ತಿರುವವರನ್ನು ನೋಡಿ ಸಂತೋಷಪಡುವ ಮಾನವನು ಸತ್ತು ಪರಜನ್ಮದಲ್ಲಿ ಪರಾಧೀನನಾಗಿಯೇ ಜನಿಸುವನು.

ಭಾವಾರ್ಥ :- ನಿರಪರಾಧಿಗಳನ್ನು ಬಂಧಿಸಿ ಕಾರಗೃಹದಲ್ಲಿ ಆತನ ಸ್ವಾತಂತ್ರ್ಯವನ್ನು ಹೋಗಲಾಡಿಸಿ ಘೋರ ಕಷ್ಟಗಳನ್ನುಂಟುಮಾಡುವುದು, ಸುಂದರ ಪಕ್ಷಿಗಳನ್ನು ಹಿಡಿದು ಗೂಡುಗಳಲ್ಲಿಡುವುದು, ನಾನಾ ಪಶುಗಳನ್ನು ಕಟ್ಟಿ ಬಂಧನದಲ್ಲಿಡುವುದು, ತಮ್ಮ ಆಮೋದ-ಪ್ರಮೋದಕ್ಕಾಗಿ ಪಶು-ಪಕ್ಷಿಗಳನ್ನು ಹಿಡಿದು ಪಂಜರದಲ್ಲಿಟ್ಟು, ಅವುಗಳಿಗೆ ಸಮಯ ಸಮಯಕ್ಕೆ ಅನ್ನಪಾನಾದಿಗಳನ್ನು ಕೊಡದೆ ಇರುವ ದುಷ್ಕೃತ್ಯಗಳಿಂದ ಅವು ಬಹಳ ದುಃಖಕ್ಕೀಡಾಗುತ್ತವೆ. ಇದೇ ರೀತಿಯಾಗಿ ರಾಜ ಕರ್ಮಚಾರಿಗಳು ನಿರಪರಾಧಿಗಳಾದ ಮಾನವರನ್ನು ಕಾರಾಗೃಹದಲ್ಲಿಟ್ಟು ಆಹಾರಾದಿಗಳನ್ನು ಕೊಡುವುದಿಲ್ಲವು. ಒಂದು ವೇಳೆ ಕೊಟ್ಟರೂ ನಿಕೃಷ್ಟ ಪದಾರ್ಥಗಳನ್ನೇ ಮಿಶ್ರಮಾಡಿ, ರುಚಿಯನ್ನು ಕೆಡಿಸಿಕೊಡುವುದು, ಹೀಗೆ ಅಧಿಕಾರದ ದರ್ಪದಿಂದ ತಮ್ಮ ದುರ್ಭರಣವನ್ನು ನಡೆಸಿ ಮಹಾಪಾಪವನ್ನು ಕಟ್ಟಿಕೊಳ್ಳುತ್ತಾರೆ. ಆ ಪಾಪದ ಘೋರ ಫಲವಾಗಿ ಪರಲೋಕದಲ್ಲಿ ಜನ್ಮತಾಳಿ ಸದಾಕಾಲವೂ ಪರಾಧೀನತೆಯ ಅಸಹ್ಯ ದುಃಖವನ್ನು ಅನುಭವಿಸುತ್ತಾರೆ.

ಇನ್ನು ಮುಂದಕ್ಕೆ ಭೋಗೋಪಭೋಗ ಸಾಮಗ್ರಿಗಳಿದ್ದರೂ ಕೂಡಾ ಅವನ್ನೇಕೆ ಅನುಭವಿಸುವುದಿಲ್ಲವೆಂಬುದನ್ನು ಹೇಳುತ್ತಾರೆ.

ಪ್ರಶ್ನೆ :- ಲಬ್ಧೇ ಸುಯೋಗ್ಯೇ ಸಕಲೇ ಪದಾರ್ಥೇ ।
ನ ಭುಜ್ಯತೇ ಕಿಂ ವದ ಮೇ ಕೃಪಾಬ್ಧೇ ॥

ಅರ್ಥ :- ಹೇ ಭಗವಾನ್ ! ಕೃಪಾನಿಧೇ !! ಕೃಪೆದೋರಿ ಸಕಲ ಸುಖ ಸಾಮಗ್ರಿಗಳ ಪ್ರಾಪ್ತಿಯಾಗಿದ್ದರೂ ಕೂಡಾ ಈ ಜೀವನು ಅವುಗಳ ಸುಖವನ್ನೇಕೆ ಅನುಭವಿಸುವುದಿಲ್ಲವು ! ಎಂಬುದನ್ನು ಹೇಳಬೇಕು.

ಉತ್ತರ :- ಕೃತಃ ಕುವಿಘ್ನಃ ಶಯನಾಸನಾದೌ ।
ಯೈರ್ಧ್ವೇಷಬುಧ್ಯಾ ವರಭೋಜನಾದೌ ॥
ಕ್ಷುಧಾತುರಾಣಾಂ ಹಿ ಕೃತೋಽಪಮಾನೋ ।
ಲಬ್ಧೇ ಪದಾರ್ಥೇಽಪಿ ನ ಭುಜ್ಯತೇ ತೈಃ ॥ ೨೬ ॥

ಅರ್ಥ :- ಯಾವ ಮನುಷ್ಯನು ಈರ್ಷಾಭಾವನೆಯಿಂದ ಬೇರೆಯವರ ಅಶನ, ಶಯನ ಮೊದಲಾದ ಉಪಭೋಗ ಪದಾರ್ಥಗಳಲ್ಲಿ ವಿಘ್ನವನ್ನುಂಟು



ಮಾಡುವನೋ, ಭೋಜನ ಮೊದಲಾದ ಭೋಗ ವಸ್ತುಗಳಲ್ಲಿ ತೊಂದರೆ ಯನ್ನೆಸಗುವನೋ, ಹೊಟ್ಟೆಹಸಿವೆಯಿಂದ ಬಳಲುವವರನ್ನು ಕಂಡು, ಅಪಮಾನಗೊಳಿಸುವನೋ, ಅಂತಹ ನಿರ್ಭಾಗ್ಯ ಮಾನವನು ತಾನು ಎಷ್ಟೋ ಭೋಗೋಪಭೋಗ ಸಾಮಗ್ರಿಗಳನ್ನು ಪ್ರಾಪ್ತಮಾಡಿಕೊಂಡಿದ್ದರೂ ಕೂಡಾ ತತ್ ಸಂಬಂಧ ಸುಖವನ್ನು ಅನುಭವಿಸಲಾರನು.

ಭಾವಾರ್ಥ :- ಪರರ ಭೋಗೋಪಭೋಗ ಸುಖ ಸಾಮಗ್ರಿಗಳಲ್ಲಿ ವಿಘ್ನ, ತೊಂದರೆಯನ್ನುಂಟುಮಾಡುವುದು ಅಂತರಾಯಕರ್ಮದ ಆಸ್ರವಕ್ಕೆ ಕಾರಣವಾಗುತ್ತದೆ. ಆ ಅಂತರಾಯ ಕರ್ಮದ ಪ್ರಬಲ ಉದಯದಿಂದ ತನ್ನ ಭೋಗೋಪಭೋಗಗಳಲ್ಲಿಯೂ ವಿಘ್ನವನ್ನೇ ತಂದೊಡ್ಡುವುದು. ಇದೇ ಪ್ರಕಾರ ಕ್ಷುಧಾಪೀಡಿತರು, ಬಾಯಾರಿಕೆಯಿಂದ ಬಳಲಿದವರು, ವಸ್ತ್ರಹೀನರು ಚಿಂದಿಬಟ್ಟೆಗಳನ್ನುಟ್ಟು ತಿರುಗುವ ನಿರ್ಧನರನ್ನು, ನಿರ್ಗತಿಕರನ್ನು, ದುಃಖ ಪೀಡಿತರನ್ನು ಕಂಡು ನಿಂದಿಸುವುದು, ಅಪಮಾನಗೊಳಿಸುವುದು, ದಾರಿದ್ರ್ಯಕ್ಕೂ ಅಸಹ್ಯ, ದುಃಖಕ್ಕೂ ಕಾರಣವಾಗಿರುತ್ತದೆ. ಆನೆ, ಕುದುರೆ, ರಥ ಮೊದಲಾದವುಗಳು, ಉತ್ತಮೋತ್ತಮ ಭೋಜನ ಪದಾರ್ಥ, ಪಾನೀಯ ವಸ್ತು, ಅಶನ, ಶಯನ ಮೊದಲಾದ ಸುಖಸಾಮಗ್ರಿಗಳು, ರೂಪವತಿಯರಾದ ಸ್ತ್ರೀಯರು, ಇವೇ ಮೊದಲಾದ ನಾನಾ ಸುಖವಸ್ತುಗಳಿದ್ದರೂ ತಮ್ಮ ಪೂರ್ವಕೃತ ಅಂತರಾಯಕರ್ಮದ ಉದಯದಿಂದ ಆ ವಸ್ತುಗಳ ಸಂಬಂಧವಾದ ಭೋಗೋಪ ಭೋಗ ಸುಖಗಳನ್ನು ಅನುಭವಿಸಲಾರರು. ಆದ್ದರಿಂದ ಈ ಎಲ್ಲ ವಿಚಾರವನ್ನು ತಿಳಿದು ಯಾರೂ ಯಾರಿಗೂ ಯಾವಕಾರ್ಯಗಳಲ್ಲಿ ವಿಘ್ನವನ್ನು, ತೊಂದರೆಯನ್ನು, ಅಂತರಾಯವನ್ನು ಮಾಡಬಾರದು. ಇವನ್ನು ಸ್ಮರಣೆಯಲ್ಲಿಟ್ಟುಕೊಳ್ಳಿರಿ; ಯಾರಾದರು ಹಿಂಸೆ, ಕಳ್ಳತನ, ವ್ಯಭಿಚಾರ ಮೊದಲಾದ ಪಾಪ ಕಾರ್ಯಗಳನ್ನು ಮಾಡುತ್ತಿದ್ದರೆ ಅಂತಹ ಕಾರ್ಯಗಳಲ್ಲಿ ವಿಘ್ನಮಾಡುವುದು, ತಡೆಮಾಡುವುದು ಅಂತರಾಯ ಕರ್ಮಾಸ್ರವಕ್ಕೆ ಕಾರಣವಾಗಲಾರದು. ಯಾಕೆಂದರೆ ಪಾಪಕಾರ್ಯಗಳಲ್ಲಿ ವಿಘ್ನವನ್ನುಂಟುಮಾಡುವುದರಿಂದ ಮಲಿನ ಪರಿಣಾಮ, ಅಶುಭ ವಿಚಾರವು ಉದ್ಭವಿಸುವುದಿಲ್ಲವು. ಶುಭ ಪರಿಣಾಮ ವಿದ್ದರೇನೆ ಪಾಪಕಾರ್ಯಗಳನ್ನು ತಡೆಯಲು ಬುದ್ಧಿಯುಂಟಾಗುವುದೆಂದು ನಿಶ್ಚಯಿಸಿಕೊಳ್ಳಬೇಕು.

ಮುಂದಕ್ಕೆ ಕುರೂಪನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾದ್ ।
ಮೃತ್ವಾ ಕುರೂಪೋ ಭವತೀಹ ಜೀವಃ ॥

ಅರ್ಥ :- ಹೇ ಕೃಪಾನಿಧೆ ! ಕೃಪೆದೋರಿ ಯಾವ ಪಾಪಕರ್ಮದ ಉದಯದಿಂದ ಈ ಜೀವನು ಕುರೂಪನಾಗಿ ಜನಿಸುವನೆಂಬುದನ್ನು ಹೇಳಬೇಕು.

ಉತ್ತರ :- ಕುರೂಪಜೀವಸ್ಯ ಕೃತಾಪಮಾನಾ-
ದಾರೋಪಣಾದ್ ದಿವ್ಯತನೌ ಮಲಾದೇಃ ।
ತದ್ರೂಪ ಹಾನ್ಯೈ ಚ ಕೃತಪ್ರಯಾಸಾತ್
ಮೃತ್ವಾ ಕುರೂಪಃ ಸ ಭವೇದಭಾಗ್ಯಃ ॥ ೨೭ ॥

ಅರ್ಥ :- ಕುರೂಪಿಗಳನ್ನು ಕಂಡು ಹೀಯಾಳಿಸಿ ಅಪಮಾನಗೊಳಿಸುವುದು, ಸುಂದರ ರೂಪವುಳ್ಳವರ ಶರೀರದಲ್ಲಿ ಯಾವ ವಿಧದಿಂದಲಾದರೂ ಕಲಂಕವನ್ನುಂಟುಮಾಡಿ ಅವರ ಸುಂದರತೆಯನ್ನು ಕೆಡಿಸಿ ವಿಕೃತಿಯನ್ನಾಗಿ ಮಾಡುವುದು, ಅಂತಹ ಕಾರ್ಯಕ್ಕಾಗಿ ಅನೇಕ ದುಷ್ಪ್ರಯತ್ನಗಳನ್ನು ಮಾಡುತ್ತಾ ಮಾಡುತ್ತಾ ಸತ್ತು ನಿರ್ಭಾಗ್ಯನಾದ ಮಹಾ ಕುರೂಪಿಯಾಗಿ ಜನಿಸುವನು.

ಭಾವಾರ್ಥ :- ಈ ಲೋಕದಲ್ಲಿ ಅನ್ಯರ ಸುಂದರ ರೂಪವನ್ನು ಕೆಡಿಸುವುದಕ್ಕೆ ನಾನಾ ವಿಧವಾಗಿ ಪ್ರಯತ್ನಿಸುವ ಜೀವಗಳಿವೆ. ಒಂದು ವೇಳೆ ಯಾವನಾದರೊಬ್ಬ ಕಾಮದೇವನರೂಪಕ್ಕೆ ಹೋಲುವ ಸುಂದರ ಪುರುಷನ ಅಂಗೋಪಾಂಗಗಳು ವಿಕೃತವಾಗುತ್ತಿರುವುದನ್ನು ಕಂಡು ಆನಂದಭರಿತನಾಗುವನೋ ಅಥವಾ ಕುರೂಪಿಯಾದಮೇಲೆಯೂ ಅವರನ್ನು ಕಂಡು ಧಿಕ್ಕರಿಸುವುದು, ರೂಪಕೆಟ್ಟು ಹೋಗುವಂತೆ ಪ್ರಯತ್ನಿಸುವುದು, ಮನೋಹರ ಅಂಗದವರನ್ನು ಕುರೂಪಿಗಳನ್ನಾಗಿ ಮಾಡಲಿಚ್ಛಿಸುವುದು, ಇವೇ ಮೊದಲಾದ ನೀಚ, ಅಸೂಯೆ ಭಾವನೆಯುಳ್ಳವನು ಮರಣಾನಂತರ ತಾವು ಮಾಡಿರುವ ಮಹಾ ಪಾಪಕೃತ್ಯಗಳ ಮತ್ತು ಭಾವನೆಗಳ ಫಲವಾಗಿ ಕುಬ್ಜನಾಗಿಯೂ, ಏಕಾಕ್ಷಿ



(ಒಂದೇ ಕಣ್ಣು) ಉಳ್ಳವನಾಗಿಯೂ, ಕೈಕಾಲುಗಳಿಲ್ಲದ ಮಹಾ ಕುರೂಪಿಯಾಗಿಯೇ ಜನಿಸುವನು. ಆದ್ದರಿಂದ ಪ್ರತಿಯೊಬ್ಬ ಶ್ರಾವಕನು ನೀಚಭಾವನೆ ಭಾವಿಸದೆ ಇರುವುದೇ ಆತ್ಮಸುಖದ ಸುಲಭ ಮಾರ್ಗವಾಗಿರುತ್ತದೆ.

ಮುಂದಕ್ಕೆ ಉತ್ತಮ ಪದಾರ್ಥಗಳಿದ್ದರೂ ಅವನ್ನು ಉಪಭೋಗಿಸುವದಕ್ಕೆ ಆಗದೆ ಇರಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಸದ್ವಸ್ತು ಭಾರ್ಯಾದಿಕ ವಿದ್ಯಮಾನೇ ।
ಕಿಂ ಭುಜ್ಯತೆ ನೈವ ಗುರೋ ! ವದಾದ್ಯ ॥

ಅರ್ಥ :- ಹೇ ಸದ್ಗುರು ! ದಯವಿಟ್ಟು ಹೇಳಬೇಕು ಸುಂದರ ಸ್ತ್ರೀಯರೇ ಮೊದಲಾದ ಶ್ರೇಷ್ಠ ಪದಾರ್ಥಗಳಿದ್ದರೂ ಕೂಡಾ ಅವನ್ನೇಕೆ ಈ ಜೀವನು ಅನುಭವಿಸುವುದಿಲ್ಲವು?

ಉತ್ತರ :- ದೃಷ್ಟ್ವಾ ಪರೇಷಾಂ ಪ್ರಿಯವಸ್ತು ಭಾರ್ಯಾಂ ।
ಚಿತ್ತೇಪಿ ತೋಷೋ ಹೃದಿ ಯಸ್ಯ ನಾಸ್ತಿ ॥
ತತ್ತೇವನೇಚ್ಛಾ ಖಲು ವೇತಿ ತೇನ ।
ನ ಭುಜ್ಯತೇ ಸತ್ಯಪಿ ಸತ್ಪದಾರ್ಥೇ ॥ ೨೮ ॥

ಅರ್ಥ :- ಪರರ ಸುಂದರ ಸ್ತ್ರೀಯರನ್ನೋ ಅಥವಾ ಪದಾರ್ಥಗಳನ್ನೋ ಕಂಡು ಅವೆಲ್ಲವನ್ನು ಅನುಭವಿಸಬೇಕೆಂದು ದುಷ್ಟವಿಚಾರವುಳ್ಳವನು ಮುಂದಿನ ಜನ್ಮದಲ್ಲಿ ಜನಿಸಿ ಉತ್ತಮ ಭವನ, ಸಂಪತ್ತಿ ಮತ್ತು ಸುಂದರ ಸ್ತ್ರೀಯರೇ ಮೊದಲಾದ ಅನುಕೂಲ ಸಾಮಗ್ರಿಗಳಿದ್ದರೂ ಅನುಭವಿಸುವ ಭಾಗ್ಯವಿಲ್ಲವು.

ಭಾವಾರ್ಥ :- ಸಂಸಾರದಲ್ಲಿ ಯಾವ-ಯಾವ ಪದಾರ್ಥಗಳು ಪ್ರಾಪ್ತವಾಗುವವೋ ಅವೆಲ್ಲವೂ ಅವರವರ ಕರ್ಮಗಳ ಉದಯದಿಂದೆಂದು ತಿಳಿದಿರಬೇಕು. ಅವುಗಳಲ್ಲಿ ಪುಣ್ಯಕರ್ಮದ ಉದಯದಿಂದ ಉತ್ತಮ ಪದಾರ್ಥಗಳು, ಪಾಪಕರ್ಮದ ಉದಯದಿಂದ ಅನಿಷ್ಟ ಪದಾರ್ಥಗಳು ಪ್ರಾಪ್ತವಾಗುವುವು. ಈ ಅವಸ್ಥೆಯಲ್ಲಿ ಅನ್ಯರ ಸುಂದರ, ಉತ್ತಮ ಪದಾರ್ಥಗಳನ್ನು ಕಂಡು ಅಸೂಯೆ ಪಡುವಿಕೆ, ಸಂತೋಷಪಡದಿರುವುದು ಅಜ್ಞಾನದ ಮೂರ್ಧನ್ಯ ಅವಸ್ಥೆಯಾಗಿ

ರುತ್ತದೆ. ಆ ಅಜ್ಞಾನದಿಂದ ಮಹಾ ಪಾಪವುಂಟಾಗುವುದು ಹಾಗೆ ಮಹಾ ಅಜ್ಞಾನತೆಯಿಂದಲೇ ಎಷ್ಟೋ ಜನರು ಪರರ ಉತ್ತಮ ವಸ್ತುಗಳನ್ನು ಅಥವಾ ಸುಂದರ ಸ್ತ್ರೀಯರನ್ನು ಸೇವಿಸಬೇಕೆಂದು ಇಚ್ಛಿಸುತ್ತಾರೆ. ಆದರೆ ಆ ಪಾಪ ಕರ್ಮದ ಉದಯದ ಫಲದಿಂದ ಅವನ್ನು ಹೇಗೆ ತಾನೇ ಅನುಭವಿಸಲು ಸಾಧ್ಯವು? ಪಾಪಕರ್ಮವನ್ನು ಮಾಡಬೇಕೆಂಬ ಇಚ್ಛೆಯಿಂದ ಅದೇ ಜಾತಿಯ ಪಾಪಬಂಧವನ್ನೇ ಬಂಧಿಸಿಕೊಳ್ಳುತ್ತಾರೆ. ಅವರು ಪರಜನ್ಮದಲ್ಲಿ ರೋಗಿಗಳಾಗಿಯೂ, ನಪುಂಸಕರಾಗಿಯೂ ದುಃಖವನ್ನನುಭವಿಸುತ್ತಾರೆ. ಆದ್ದರಿಂದ ಮೇಲ್ಕಂಡ ಪದಾರ್ಥಗಳನ್ನು ಉಪಭೋಗಿಸಲಾರರು. ದಯವಿಟ್ಟು ಪರರ ವಸ್ತುಗಳನ್ನು ನೋಡಿ ಅಸಂತೋಷ ಪರಿಣಾಮವನ್ನು ಭಾವಿಸದಿರುವುದೇ ಸುಖದ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಕ್ರೋಧಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾ - ।
ದತ್ಯಂತ ಕ್ರೋಧೀ ಭವತೀಹ ಜೀವಃ ॥

ಅರ್ಥ :- ಹೇ ಭಗವಾನ್ ! ಯಾವ ಪಾಪಕರ್ಮದ ಉದಯದಿಂದ ಜೀವನು ಕ್ರೋಧಿಯಾಗುವನೆಂಬುದನ್ನು ಕೃಪೆದೋರಿ ಅಪ್ಪಣೆಕೊಡಿಸಬೇಕು.

ಉತ್ತರ :- ಕ್ರೋಧಿಸ್ಸ್ವಯಂ ಕುಪ್ಯತಿ ವಾ ಹ್ಯತುಷ್ಯತ್ ।
ಕ್ರುಧ್ಯಂತ ಮೇವಾಪಿ ಮಿಥೋ ವಿಲೋಕ್ಯ ॥
ಪೂರ್ವೋಕ್ತ ಸಂಸ್ಕಾರ ವಶಾತ್ ಸ ಕೋಪೀ ।
ಭವತ್ಯವಶ್ಯಂ ಭವ ದುಃಖ ಭೋಗೀ ॥ ೨೯ ॥

ಅರ್ಥ :- ಕೋಪಿಷ್ಠನು ಜನರಲ್ಲಿ ಕ್ರೋಧವನ್ನುಂಟುಮಾಡುವ ಕಲಹ, ಜಗಳಗಳ ಸನ್ನಿವೇಶವನ್ನು ಉದ್ಭವಮಾಡಿ ತಾನು ಆನಂದಸಾಗರದಲ್ಲಿ ಈಜಾಡುವನು. ಇದು ಪೂರ್ವ ಜನ್ಮದ ದುಷ್ಟಸಂಸ್ಕಾರದ ಫಲ. ಆದರಿಂದ ಅತ್ಯಂತ ಕ್ರೋಧಿಯಾಗುತ್ತಾನೆ. ಆ ಸಂಸ್ಕಾರದ ಪ್ರಭಾವದಿಂದ ಘೋರ ದುಃಖವನ್ನನುಭವಿಸುತ್ತಾನೆ.



ಭಾವಾರ್ಥ :- ಕ್ರೋಧವು ಸಕಲ ಪಾಪಗಳಿಗೆ ಪ್ರಧಾನ ಕಾರಣವಾಗಿರುತ್ತದೆ. ಕ್ರೋಧಿಮಾನವನು ಅನೇಕ ಜೀವಗಳ ಘಾತಕನಾಗುತ್ತಾನೆ. ಮಾತ್ರವಲ್ಲ ಕ್ರೋಧ ಪಿಶಾಚಿಯ ಬಲೆಗೆ ಸಿಲುಕಿ ತನ್ನ ಆತ್ಮಘಾತವನ್ನು ಮಾಡಿಕೊಳ್ಳುವನು. ಈ ಆತ್ಮಹತ್ಯಾದೋಷವು ಮಹಾಪಾಪಕ್ಕೆ ಕಾರಣವಾಗಿ ನರಕಾದಿ ದುರ್ಗತಿಗಳನ್ನು ಪಡೆಯುವನು. ಇದರಿಂದ ಕ್ರೋಧವೆಂಬುದು ಪಾಪಿಯೆಂದು ಸಿದ್ಧವಾಯಿತು. ಯಾವ ಜೀವನು ಪೂರ್ವಜನ್ಮದಲ್ಲಿ ಮಹಾ ಕ್ರೋಧಿಯಾಗಿಯೂ, ಪರಸ್ಪರ ಜಗಳ, ಕಲಹವಾಡಿಸಿ ಅದನ್ನು ಕಂಡು ಪ್ರಸನ್ನಚಿತ್ತನಾಗುವುದು, ಪಶು-ಪಕ್ಷಿಗಳು ಪರಸ್ಪರ ಜಗಳವಾಡುತ್ತಿರುವುದನ್ನು ನೋಡಿ ಹಿರಿಹಿರಿಹಿಗ್ಗುವುದು ಇವೇ ಮೊದಲಾದ ನೀಚಮನಸ್ಸುಳ್ಳ ಮಾನವನು ಕ್ರೋಧಿಯಾಗುವನು. ಆದ್ದರಿಂದ ಭವ್ಯ ಜೀವಗಳು ಕ್ರೋಧವನ್ನು, ಹಿಂಸಾನಂದವನ್ನು ಪಡದೆ ಶಾಂತಸ್ವಾಭಾವದಿಂದಿರುವುದೇ ಆತ್ಮಶಾಂತಿಯ ಮಾರ್ಗವಾಗಿರುತ್ತದೆ.

ಮುಂದಕ್ಕೆ ಲೋಕನಿಂದೆಗೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾದ್ ।
ನಿಂದ್ಯೋ ಭವೇಚ್ಚಾನ್ಯಭವೇ ಹಿ ಜೀವಃ ॥

ಅರ್ಥ :- ಹೇ ಪ್ರಭು ! ಈ ಜೀವನು ಯಾವ ಪಾಪಕರ್ಮದ ಫಲವಾಗಿ ಲೋಕನಿಂದೆಗೆ ಗುರಿಯಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ತಪಃ ಪ್ರದೋಷಂ ಚ ಹಟಾತ್ಕಸಾರ್ಯ ।
ಯಃ ಕೀರ್ತಯೇ ವಾಪಿ ಧನಂ ಸಸರ್ಜ ।
ಪಾಷಂಡಿ ಸಾಧೋರಕರೋತ್ಪ್ರಶಂಸಾಂ ।
ನಿಂದ್ಯೋ ಭವೇಚ್ಚಾನ್ಯಭವೇ ಸ ಮೃತ್ವಾ ॥ ೩೦ ॥

ಅರ್ಥ :- ಯಾವ ಪುರುಷನು ಹಟಪೂರ್ವಕ ತಪಶ್ಚರಣಾದಿಗಳಲ್ಲಿ ದೋಷಾರೋಪಣೆಗೈಯುವನೋ, ಕೇವಲ ತನ್ನ ಕೀರ್ತಿಯ ಸಲುವಾಗಿ ಧನ ಸಂಪತ್ತಿಯನ್ನು ವ್ಯಯಮಾಡುವನೋ ಮತ್ತು ಮಿಥ್ಯಾದೃಷ್ಟೀ ತಪಸ್ವಿಗಳ ಪ್ರಶಂಸೆ

ಮಾಡುತ್ತಾ ಕಾಲಕಳೆಯುವನೋ ಅಂತಹ ಮಾನವನು ಸತ್ತು ಪರ ಭವದಲ್ಲಿ ಜನ್ಮತಾಳಿ ಲೋಕನಿಂದೆಗೆ ಗುರಿಯಾಗುತ್ತಾನೆ.

ಭಾವಾರ್ಥ :- ವ್ಯರ್ಥವಾಗಿ ಪರರನ್ನು ನಿಂದಿಸುವವನು ಸ್ವಯಂನಿಂದೆಗೆ ಪಾತ್ರನಾಗುವನೆಂದು ಮಹಾತ್ಮರು ಸಾರಿರುತ್ತಾರೆ. ಸಾಕ್ಷಾತ್ ಮೋಕ್ಷಕ್ಕೆ ಕಾರಣೀಭೂತವಾದ ತಪಶ್ಚರಣದಲ್ಲಿ ಕಲಂಕವನ್ನುಂಟುಮಾಡುವುದು, ಆ ತಪಸ್ವಿಗಳನ್ನು ದೋಷಕ್ಕೆ ಗುರಿಪಡಿಸುವುದು ಮಾಹಾನಿಂದ್ಯವಾದ ಕಾರ್ಯವಾಗಿರುತ್ತದೆ. ಅವರನ್ನು ನಿಂದಿಸುವುದರಿಂದ ಮೋಕ್ಷವನ್ನೇ ನಿಂದಿಸುವುದೆಂದರ್ಥವು. ಈ ಎರಡು ಕಾರ್ಯಗಳು ಮಿಥ್ಯಾತ್ವಕರ್ಮದ ತೀವ್ರ ಉದಯದಿಂದಲೇ ಉಂಟಾಗುವುವು. ಇವುಗಳಿಂದ ಮತ್ತಷ್ಟು ತೀವ್ರ ಮಿಥ್ಯಾತ್ವ ಕರ್ಮದ ಬಂಧವಾಗುವುದು. ಅದರ ತೀವ್ರ ಉದಯದಿಂದ ಆ ಜೀವನು ಮರಣವನ್ನು ಪಡೆದನಂತರ ನೀಚ ಯೋನಿಯಲ್ಲಿ ಜನಿಸಿ ಮಹಾ ನಿಂದ್ಯನೀಯನಾಗುವನು. ಯಾವನು ಕೇವಲ ಸ್ವಾರ್ಥಪರನಾಗಿ ಕೀರ್ತಿಯನ್ನು ಸಂಪಾದಿಸುವುದಕ್ಕಾಗಿ ತನ್ನ ಧನಸಂಪತ್ತಿಯನ್ನು ಧಾರ್ಮಿಕ ಕಾರ್ಯಗಳಿಗಾಗಿ ವ್ಯಯಗೊಳಿಸುವುದು, ಮಿಥ್ಯಾತಪಸ್ವಿಗಳಾದ ಪಾಖಂಡೀತಪಸ್ವಿಗಳನ್ನು ಪ್ರಶಂಸಿಸುವುದು, ಅವರ ಸಹವಾಸವನ್ನು ಮಾಡುವುದು ಕೂಡಾ ನಿಂದೆಗೆ ಗುರಿಯಾಗುವುದು. ಏಕೆಂದರೆ ಧನಸಂಪತ್ತಿಯ ಪ್ರಾಪ್ತಿಯು ಧರ್ಮದ ಆಶ್ರಯದಿಂದಲೇ ಆಗಿರುವುದು. ಆ ಧನಸಂಪತ್ತಿಯನ್ನು ದಾನ-ಧರ್ಮ ಪರೋಪಕಾರಾದಿ ಕಾರ್ಯಗಳಲ್ಲಿ ಉಪಯೋಗಿಸುವುದರಿಂದಲೇ ವಿಶೇಷ ಪುಣ್ಯವೂ, ಸುಖ ಸಾಮಗ್ರಿಗಳ ಅನುಕೂಲತೆಯೂ, ಸತ್ಕೀರ್ತಿಯೂ ಈತನ ಪಾಲಿಗೆ ಕಟ್ಟಿಟ್ಟ ಬುತ್ತಿಯೆಂದೇ ತಿಳಿಯಬೇಕು. ಕೇವಲ ಕೀರ್ತಿಗಾಗಿಯೂ, ಹೊಗಳಿಕೆಗಾಗಿಯೂ ತನ್ನ ಹಣವನ್ನು ವ್ಯಯ ಮಾಡುತ್ತಾ ಧಾರ್ಮಿಕ ಕಾರ್ಯಗಳಿಗೆ ನಾಸ್ತಿಯೆಂದು ಹೇಳುವುದು ಇದರಿಂದ ಲೋಕನಿಂದೆಗೆ ಪಾತ್ರನಾಗುತ್ತಾನೆ. ಆದ್ದರಿಂದ ಉತ್ತಮ ತಪಸ್ವಿಗಳನ್ನೂ, ಅವರ ತಪಸ್ಸನ್ನು ದೂಷಣೆಮಾಡದಿರುವುದೂ, ಮಿಥ್ಯಾತಪಸ್ವಿಗಳನ್ನು ಪ್ರಶಂಸಿಸದಿರುವಿಕೆ ಇವೇ ಆತ್ಮ ಕಲ್ಯಾಣದ ಸುಲಭೋಪಾಯವಾಗಿರುತ್ತದೆ.

ಮುಂದಕ್ಕೆ ಆದರ-ಸತ್ಕಾರಾದಿಗಳಿಗೆ ಪಾತ್ರರಾಗದಿರುವ ಕಾರಣವನ್ನು ಹೇಳುತ್ತಾರೆ.



ಪ್ರಶ್ನೆ :- ಸುಯಾಚ್ಞ ಮಾನೇ ಲಭತೇ ನ ಮಾನಂ ।
ಕಿಂ ಕಾರಣಂ ತತ್ರ ವದ ಪ್ರಭೋ ! ಮೇ ॥

ಅರ್ಥ :- ಹೇ ದಯಾಪ್ರಭು ! ದಯೆಮಾಡಿ ಜಗತ್ತಿನಲ್ಲಿ ಅನೇಕ ಜನರು ಆದರ-ಸತ್ಕಾರಗಳನ್ನು ಯಾಚಿಸುತ್ತಿದ್ದರೂ ಅವರ ಪಾಲಿಗೆ ಆದರ-ಸತ್ಕಾರವು ಏಕೆ ಪ್ರಾಪ್ತವಾಗುವುದಿಲ್ಲವೆಂಬುದನ್ನು ಹೇಳಬೇಕು.

ಉತ್ತರ :- ವಿದ್ಯಾಭಿಮಾನಾನ್ನ ನುತಿಃ ಸ್ತುತಿರ್ಯೈಃ ।
ಕೃತಾ ನ ಸಾಧೋರ್ವಿನಯೋಪಚಾರಃ ॥
ಧರ್ಮಾದ್ವಿರುದ್ಧಾಪಿ ಕೃತಾ ಪ್ರವೃತ್ತಿಃ ।
ಸುಯಾಚ್ಞಮಾನೆ ಲಭತೇ ನ ಮಾನಮ್ ॥ ೩೧ ॥

ಅರ್ಥ :- ತನ್ನ ವಿದ್ಯಾಭಿಮಾನದ ದುರಹಂಕಾರದಿಂದ ನಿರ್ಗ್ರಂಥ ವೀತರಾಗ ಮುನಿಗಳಿಗೆ ವಂದನೆ ಮಾಡದೆಯೂ, ಸ್ತುತಿಸದೆಯೂ, ವಿನಯ ಗೈಯದೆಯೂ, ಸೇವೆ ಮಾಡದೆಯೂ ಮತ್ತು ಸದಾ ಕಾಲವು ಧರ್ಮವಿರುದ್ಧ ಕಾರ್ಯಗಳಲ್ಲಿಯೇ ಮಗ್ನನಾಗಿರುವ ಮಾನವನು ಆದರ-ಸತ್ಕಾರಾದಿಗಳಿಗೆ ಆಶೆಪಡುತ್ತಿದ್ದರೂ ಅದು ಪ್ರಾಪ್ತವಾಗುವುದಿಲ್ಲವು.

ಭಾವಾರ್ಥ :- ಮೋಕ್ಷಮಾರ್ಗದಲ್ಲಿ ವಿದ್ಯೆಗೆ ಯಾವ ಮೌಲ್ಯವಿಲ್ಲವು. ಮೋಕ್ಷಮಾರ್ಗದಲ್ಲಿ ಸಮ್ಯಕ್ಚಾರಿತ್ರಕ್ಕೇನೇ ಪ್ರಾಧಾನ್ಯತೆಯಿರುವುದು. ಮೊದಲನೆಯ ಸ್ವರ್ಗದ ಇಂದ್ರನು ಅಂಗಪೂರ್ವ ಪಾಠಿಯಾಗಿದ್ದರೂ ಕೂಡಾ ತತ್ಕಾಲ ದೀಕ್ಷಿತ ಮುನಿಯನ್ನು ಪರಮ ಭಕ್ತಿಭಾವದಿಂದ ವಂದಿಸುತ್ತಾನೆಂದ ಮೇಲೆ ಸಮ್ಯಕ್ಚಾರಿತ್ರಕ್ಕಲ್ಲವೆ ಪೂಜ್ಯತೆಯು, ಪ್ರಾಧಾನ್ಯತೆಯು ಇರುವುದೆಂದು ತಿಳಿಯಬೇಕು. ಅಂತಹ ಸಮ್ಯಕ್ಚಾರಿತ್ರವನ್ನು ಧಾರಣೆಮಾಡಿದ ಸಾಧುಗಳನ್ನೂ ಜ್ಞಾನ ಮದ, ಧನಮದಗಳಿಗೆ ವಶೀಭೂತನಾಗಿ ವಿನಯ, ಭಕ್ತಿ, ಸ್ತುತಿ, ವಂದನೆಗಳನ್ನು ಮಾಡದೆ ಇರುವವನು ತನ್ನ ಮರಣಾನಂತರ ಮುಂದಿನ ಭವದಲ್ಲಿ ಜನಿಸಿ ಎಷ್ಟೋ ವಿಧವಾಗಿ ಶತಪ್ರಯತ್ನಪಡುತ್ತಿದ್ದರೂ, ಯಾಚಿಸಿದರೂ ಕೂಡಾ ಆದರ-ಸತ್ಕಾರವು ಆತನ ಹತ್ತಿರವೇ ಸುಳಿಯುವುದಿಲ್ಲವು. ಇದೇ ಪ್ರಕಾರವಾಗಿ ಧನಮದಾಂಧನಾಗಿ ಧರ್ಮವಿರುದ್ಧ ಕಾರ್ಯಗಳನ್ನು, ದೇವ, ಶಾಸ್ತ್ರ,

ಗುರುಗಳಲ್ಲಿ ಅವಿನಯವನ್ನು ಮಾಡಿದುದರ ಫಲವಾಗಿ ಆತನಿಂದ ಮಾನಸನ್ಮಾನಗಳು ದೂರಾಗುತ್ತಲೇ ಹೋಗುತ್ತವೆ. ಆದ್ದರಿಂದ ಭವ್ಯಾತ್ಮರು ವಿನಯಶೀಲರಾಗಿ ದೇವ, ಶಾಸ್ತ್ರ, ಗುರುಗಳನ್ನು ಪೂಜಿಸಿ, ಸ್ತುತಿಸಿ, ನಮಿಸಿ ಆತ್ಮಕಲ್ಯಾಣಮಾಡಿಕೊಳ್ಳುವುದು ಉತ್ತಮ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಅಸ್ತ್ರ-ಶಸ್ತ್ರಾದಿಗಳಿಂದ ಮರಣಹೊಂದಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಶಸ್ತ್ರಾಸ್ತ್ರಯೋಗಾದ್ ಮ್ರಿಯತೇ ಹಿ ಜೀವಃ ॥

ಅರ್ಥ :- ಹೇ ಭಗವಾನ್ ! ಈ ಜೀವನು ಅಸ್ತ್ರ-ಶಸ್ತ್ರಾದಿಗಳಿಂದ ಅಪಮೃತ್ಯು ಹೊಂದಲು ಯಾವ ಘೋರ ಪಾಪಕರ್ಮದ ಉದಯ ದಿಂದೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ವಧಸ್ಯ ಶಂಸಾಪ್ಯನುಮೋದನಾದಿಃ ।
ಕೃತೋಪದಿಷ್ಟಶ್ಚ ವಧಾದ್ಯುಪಾಯಃ ॥
ದುಷ್ಟಂ ಚರಿತ್ರಂ ಚರಿತಂ ಚ ಯೇನ ।
ಸ ಚಾನ್ಯಶಸ್ತ್ರೈರ್ಮ್ರಿಯತೇ ಮನುಷ್ಯಃ ॥ ೩೨ ॥

ಅರ್ಥ :- ಜೀವಹಿಂಸಾಕಾರ್ಯಗಳನ್ನು ನೋಡಿ ಪ್ರಶಂಸಿಸುವುದು, ಅನುಮೋದನೆಯನ್ನೀಯುವುದು, ಮತ್ತೆ ಹೀಗೆ ನಾನಾ ಉಪಾಯಗಳನ್ನು ಹೇಳಿಕೊಡುವುದು ಇವೇ ಮೊದಲಾದ ದುರಾಚಾರಾದಿಗಳಲ್ಲಿ ಮಗ್ನರಾಗಿರುವ ಮಾನವರು ಪ್ರಾಯಶಃ ಪರರ ಅಸ್ತ್ರ-ಶಸ್ತ್ರಾದಿಗಳಿಗೆ ತುತ್ತಾಗಿ ಮರಣಕ್ಕೆ ಗುರಿಯಾಗುವರು.

ಭಾವಾರ್ಥ :- ಜೀವಹಿಂಸೆಯು ಮಹಾ ಪಾಪಕಾರ್ಯವಾಗಿರುತ್ತದೆ. ಅದು ಸಾಕ್ಷಾತ್ ನರಕಕ್ಕೆ ಕಾರಣವಾಗಿರುತ್ತದೆ. ಯಾವ ಪ್ರಕಾರ ಜೀವಹಿಂಸೆಯು ಮಹಾ ಪಾಪಕರವೋ, ಅದೇ ಪ್ರಕಾರ ಹಿಂಸಾಕಾರ್ಯಗಳನ್ನು ಪ್ರಶಂಸಿಸುವುದು, ಹಿಂಸಾಕಾರ್ಯಗಳಿಗೆ ಅನುಮೋದನೆಯನ್ನೀಯುವುದು, ಮತ್ತು



ಉಪಾಯಗಳನ್ನು ಹೇಳಿಕೊಡುವುದು ಇವೆಲ್ಲವೂ ಮಹಾ ಪಾಪಕಾರ್ಯಗಳೆಂದೇ ಪರಿಗಣಿಸಲ್ಪಡುವುದು. ಇಂತಹ ಕೃತಿಗಳನ್ನು ಮಾಡುವ ಮಾನವನು ನಿಶ್ಚಯವಾಗಿ ಅಸ್ತ್ರ-ಶಸ್ತ್ರಾದಿಗಳಿಂದ ಮರಣವನ್ನಪ್ಪಿಕೊಳ್ಳುವನು. ಅಸ್ತ್ರ-ಆಯುಧಗಳ ಹೊಡೆತದಿಂದ ಸಾಯುವುದು, ಈ ಪಾಪಬಂಧವು ಹಿಂಸಾ ಕಾರ್ಯದಿಂದಲೂ, ದುರಾಚಾರದಿಂದಲೂ ಸಂಭವಿಸುವುದೆಂದು ಪಾಠಕ ಗಣವು ಮರೆಯಬಾರದು. ಸಪ್ತವ್ಯಸನಗಳ ಸೇವನೆಯು ದುರಾಚಾರ ವೆಂದೆನ್ನಿಸಿಕೊಳ್ಳುವುದು. ದೇವ, ಗುರು, ಶಾಸ್ತ್ರಗಳಲ್ಲಿ ಮಿಥ್ಯಾದೋಷಾ ರೋಪಣೆ ಮಾಡುವುದೂ ಘೋರ ಪಾಪವಾಗಿರುತ್ತದೆ. ಈ ವಿಚಾರವನ್ನು ವಿಚಾರಿಸಿ ಭವ್ಯಾತ್ಮರು ನಿಂದೆ, ಹಿಂಸಾದಿ ಕಾರ್ಯಗಳನ್ನು ತ್ಯಜಿಸುವುದೇ ಆತ್ಮಶಾಂತಿಯ ಸರಳೋಪಾಯವಾಗಿರುತ್ತದೆ.

ಇನ್ನು ಮುಂದಕ್ಕೆ ಕಳ್ಳನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾ - ।
ಜ್ಜೀವಃ ಪರತ್ರಾಪಿ ಭವೇದ್ಧಿ ಚೌರಃ ॥

ಅರ್ಥ :- ಹೇ ಕೃಪಾನಿಧೇ ! ಈ ಸಂಸಾರೀ ಜೀವನು ಯಾವ ಪಾಪ ಕರ್ಮದ ಫಲವಾಗಿ ಕಳ್ಳನಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಚಾರಸ್ಯ ಶಂಸಾಪ್ಯನು ಮೋದನಾದಿಃ ।
ಚೌರಪ್ರಯೋಽಪಿ ಕೃತಶ್ಚ ಯೇನ ॥
ಇಚ್ಛಾಪರೇಷಾಂ ಬಹುರತ್ನ ರಾಜ್ಯೇ ।
ಮೃತ್ವಾ ಸ ಚೌರೋ ಭವತಿ ಹ್ಯಭಾಗ್ಯಃ ॥ ೩೩ ॥

ಅರ್ಥ :- ಯಾವನು ಕಳ್ಳನ ಚಾತುರ್ಯ ಮೊದಲಾದವುಗಳನ್ನು ವರ್ಣಿಸುವನೋ, ಅವನಿಂದ ಮಾಡಲ್ಪಟ್ಟ ಕಳ್ಳತನವನ್ನು ಅನುಮೋದಿಸು ವನೋ, ಕಳ್ಳತನದ ಉಪಾಯ ಮತ್ತು ಪ್ರಯೋಗಗಳನ್ನು ಹೇಳಿಕೊಡುವನೋ ಅಥವಾ ಪರರ ಧನ, ರತ್ನಾದಿಗಳ ದುರಾಸೆಯ ಬಲೆಯಲ್ಲಿ ಸಿಲುಕಿರುವನೋ ಅವನು ಮರಣವನ್ನು ಹೊಂದಿ ಪರಭವದಲ್ಲಿ ನಿಶ್ಚಯವಾಗಿ ನಿರ್ಭಾಗ್ಯನಾದ ಚೋರಾಗ್ರೇಸರನಾಗಿಯೇ ಜನಿಸುವನು.

ಭಾವಾರ್ಥ :- ಮಹಾ ಲೋಭಿಯಾದವನು ಸದಾ ಕಾಲವೂ ಪರರ ಧನ, ಧಾನ್ಯ, ರತ್ನ, ರಾಜ್ಯಾದಿಗಳನ್ನು ಅಪಹರಿಸುವ ದುರಾಲೋಚನೆಯಲ್ಲಿರುವನೋ, ಆ ವಸ್ತುಗಳನ್ನು ಅಪಹರಿಸಿ ತನ್ನ ಸ್ವಾಧೀನಪಡಿಸಿಕೊಳ್ಳುವ ವಿಚಾರದಲ್ಲಿರುವನೋ ಅಥವಾ ಉಪಾಯ, ಯುಕ್ತಿಗಳನ್ನು ಹೇಳಿಕೊಡುವನೋ ಮತ್ತು ಪ್ರಸಿದ್ಧರಾದ ಕಳ್ಳರನ್ನು, ಅವರ ಯುಕ್ತಿಯನ್ನು, ಪ್ರಶಂಸಿಸಿಕೊಂಡಿರುವನೋ ಅಥವಾ ಕದ್ದುತಂದ ಪದಾರ್ಥಗಳನ್ನು ತನ್ನ ಮನೆಯಲ್ಲಿ ಗುಪ್ತವಾಗಿರಿಸಿಕೊಳ್ಳುವನೋ, ಅಂತಹ ಮಾನವನು ತನ್ನ ಮರಣಾನಂತರವೂ ಮರುಭವದಲ್ಲಿ ಚೋರಾಗ್ರೇಸರನಾಗಿಯೇ ಜನಿಸುವನು. ಈ ವಿಷಯವಾಗಿ ಸ್ವಲ್ಪ ಸೂಕ್ಷ್ಮವಾಗಿ ವಿಚಾರಿಸಬೇಕು. ಕದಿಯುವಂತಹ ಸ್ವಭಾವವು ಅಭ್ಯಾಸದಿಂದ ಸಾಧ್ಯವಿದೆ. ಆದರೂ ಈ ಎಲ್ಲ ಕಾರ್ಯಗಳಲ್ಲಿ ಪೂರ್ವಜನ್ಮದ ದುಃಸಂಸ್ಕಾರವೂ ಕೂಡಾ ಕೆಲಸಮಾಡುತ್ತಿರುವುದು. ಹೀಗೆ ಎಷ್ಟೋ ದುಷ್ಪಕಾರ್ಯಗಳಿವೆ. ಅವೆಲ್ಲವುಗಳಲ್ಲಿ ಪೂರ್ವಜನ್ಮದ ಸಂಸ್ಕಾರವೂ ಕೂಡಾ ಇದ್ದೇ ಇರುತ್ತದೆಂದೂ, ಪೂರ್ವ ಸಂಸ್ಕಾರದಿಂದಲೇ ಆ ದುಷ್ಟ ದುರ್ವಿದ್ಯೆಗಳು ಬಹು ಬೇಗನೇ ಹಸ್ತಗತವಾಗುತ್ತವೆಂದು ತಿಳಿಯಬೇಕು. ಆದ್ದರಿಂದ ಭವ್ಯಾತ್ಮರು ನೀಚ ಪಾಪಕಾರ್ಯಗಳ ಅಭ್ಯಾಸದಲ್ಲಿ ಮನಸ್ಸನ್ನಿಡದಿರುವುದು ನಿಜವಾಗಿಯೂ ಆತ್ಮಕಲ್ಯಾಣ, ಶಾಂತಿ, ಸಮಾಧಾನಗಳ ಪ್ರಾಪ್ತಿಯ ಸರಳ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಕ್ರಿಯಾಹೀನನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಕ್ರಿಯಾವಿಹೀನೋ ಹಿ ಭವೇನ್ಮನುಷ್ಯಃ ॥

ಅರ್ಥ :- ಹೇ ಪರಮಾತ್ಮನೇ ! ಯಾವ ಕರ್ಮದ ಉದಯದಿಂದ ಮಾನವನು ಕ್ರಿಯಾಹೀನನಾಗಿ ಜನಿಸುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಯೇನ ಕ್ರಿಯಾಹೀನ ನರ ಪ್ರಶಂಸಾ ।
ಕೃತಾ ಕ್ರಿಯಾಯುಕ್ತ ನರ ಪ್ರಣಿಂದಾ ॥



ವಿಚಾರಶೂನ್ಯಾ ವಿಷಮಾ ಪ್ರವೃತ್ತಿಃ ।
ಕ್ರಿಯಾವಿಹೀನಃ ಸ ಭವೇದಧರ್ಮೀ ॥ ೩೪ ॥

ಅರ್ಥ :- ಯಾವ ಮನುಷ್ಯನು ತನ್ನ ವರ್ತಮಾನ ಜನ್ಮದಲ್ಲಿ ಕ್ರಿಯಾಹೀನರಾದವರ ಪ್ರಶಂಸೆಯನ್ನು ಮಾಡುವುದು, ಕಾರ್ಯತತ್ಪರರಾದವರನ್ನು ನಿಂದಿಸುವುದು ಮತ್ತು ಸ್ವಯಂ ಶಾಸ್ತ್ರಗ್ರಂಥಕ್ಕೆ ಪ್ರತಿಕೂಲವಾಗಿ ಪ್ರವರ್ತಿಸುವುದು ಇವೇ ಮೊದಲಾದ ನೀಚ ಕಾರ್ಯಗಳಲ್ಲಿ ಆಸಕ್ತನಾದ ಅಧರ್ಮೀ ಮಾನವನು ತನ್ನ ಮರಣಾನಂತರ ಪರಲೋಕದಲ್ಲಿ ನಿಶ್ಚಯವಾಗಿ ಕ್ರಿಯಾಹೀನನಾಗಿಯೇ ಜನಿಸುವನು.

ಭಾವಾರ್ಥ :- ಇಲ್ಲಿ ಕ್ರಿಯಾಶಬ್ದದ ಅರ್ಥವು ಕ್ರಿಯಾಕಾಂಡವಾಗಿರುತ್ತದೆ. ಭಗವಾನ್ ಜಿನೇಂದ್ರದೇವನ ಪೂಜೆ, ಸಾಧು-ಸಜ್ಜನರ ಸೇವೆ-ಶುಶ್ರೂಷೆ, ಸಾಮಾಯಿಕ, ಪ್ರತಿಕ್ರಮಣ, ಸ್ವಾಧ್ಯಾಯ, ಸಾಧ್ಯವಾದಷ್ಟು ವ್ರತ, ನಿಯಮ, ದೇವದರ್ಶನ, ಸೂತಕ-ಪಾತಕಗಳ ಪಾಲನೆ, ಯಜ್ಞೋಪವೀತ ಧಾರಣೆ, ಗಂಧಾರ್ಚನೆ ಮತ್ತು ಅನ್ಯ ಶಾಸ್ತ್ರೋಕ್ತಕ್ರಿಯೆಗಳ ಪಾಲನೆ ಇವೆಲ್ಲವೂ ಕ್ರಿಯಾಕಾಂಡಗಳೆಂದೇ ಹೇಳಿಸಿಕೊಳ್ಳುವವು. ಈ ಎಲ್ಲ ಕ್ರಿಯೆಗಳನ್ನು ಆಚರಿಸುವುದರಿಂದ ಧರ್ಮಬುದ್ಧಿ, ಧರ್ಮವೃದ್ಧಿಯಾಗುತ್ತಾ ಆತ್ಮ ನಿರ್ಮಲತೆ ಮತ್ತು ಸಮ್ಯಗ್ದರ್ಶನದಲ್ಲಿ ಸ್ಥಿರತೆಯು ಆಗುತ್ತದೆ. ಈ ಎಲ್ಲ ಕಾರ್ಯಗಳನ್ನು ಒಪ್ಪದಿರುವವನನ್ನು ಬದ್ಧಮಿಥ್ಯಾದೃಷ್ಟಿಯೆಂದೇ ತಿಳಿಯಬೇಕು. ಆ ಮಿಥ್ಯಾದೃಷ್ಟಿಯು ತನ್ನ ತೀವ್ರ ಮಿಥ್ಯಾತ್ವದ ಉದಯದಿಂದ ಈ ಎಲ್ಲ ಕ್ರಿಯೆಗಳನ್ನು ನಿಂದಿಸುವನು, ಮಾತ್ರವಲ್ಲ ; ಇವೆಲ್ಲವು ಜನರನ್ನು ಮೋಸಗೊಳಿಸುವ ಕಾರ್ಯಗಳೆಂದು, ಇವನ್ನು ಪಾಲಿಸುವವರನ್ನು ನಿಂದಿಸುವುದು, ನಾಸ್ತಿಕವಾದಿಗಳನ್ನು ಬಾಯಿತುಂಬ ಪ್ರಶಂಸಿಸುವುದು, ದಾನ, ಪೂಜೆ ಮೊದಲಾದ ಕ್ರಿಯೆಗಳನ್ನು ನಿಷೇಧಿಸುವ ಮಾನವನು ಮರಣಾನಂತರ ಪರಲೋಕದಲ್ಲಿ ಮಹಾ ಅಧರ್ಮಿಯಾಗಿಯೂ, ಸತ್‌ಕ್ರಿಯಾ ಸಂಸ್ಕಾರಹೀನನಾಗಿಯೂ, ನರಕ ತಿರ್ಯಂಚಾದಿ ದುರ್ಗತಿಗಳಲ್ಲಿ ಜನಿಸಿ ಘೋರ ದುಃಖವನ್ನು ಅನುಭವಿಸುತ್ತಾ ಆ ಪರ್ಯಾಯಗಳಲ್ಲಿ ಸಂಸ್ಕಾರವಿಲ್ಲದೆ ಮಹಾ ಪಾಪಕ್ಕೆ ಗುರಿಯಾಗುವನು. ಆದ್ದರಿಂದ ಸತ್ಕ್ರಿಯಾಕಾಂಡಗಳನ್ನು ಪಾಲಿಸುವುದು ಆತ್ಮಶಾಂತಿಯ ಮಾರ್ಗವಾಗಿರುತ್ತದೆ.

ಮುಂದಕ್ಕೆ ಪುತ್ರವಿಯೋಗ ದುಃಖಕ್ಕೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಿನ್ ಕುಕೃತ್ಯೇ ಚ ಕೃತೇ ಭವೇತ್ಸ್ಯಾತ್ ।
ಮಾತುಃ ಪಿತುಃ ಪುತ್ರವಿಯೋಗದುಃಖಂ ॥

ಅರ್ಥ :- ಹೇ ಭಗವಾನ್ ! ಯಾವ ಪಾಪಕರ್ಮಗಳನ್ನು ಮಾಡುವುದರಿಂದ ತಂದೆ-ತಾಯಿಗಳಿಗೆ ಪುತ್ರವಿಯೋಗರೂಪದ ಮಹಾದುಃಖವು ಪ್ರಾಪ್ತಿಯಾಗುವುದೆಂಬುದನ್ನು ಅಪ್ಪಣೆಕೊಡಿಸಬೇಕು.

ಉತ್ತರ :- ಮಾತುಃ ಪಿತುಃ ಸ್ನೇಹಕರೀಂ ಪ್ರವೃತ್ತಿಂ ।
ದೃಷ್ಟ್ವೇತ್ಯಕುಪ್ಯಾದ್ಧಿ ಸಧರ್ಮಿಣಾಂ ವಾ ॥
ದ್ರೋಹಂ ವ್ಯಥಾದಂ ಪ್ರವಿಲೋಕ್ಯತುಷ್ಯೇ ।
ದಿತ್ಯಾದಿ ಪಾಪಾದ್ವಿಷಮೋ ವಿಯೋಗಃ ॥ ೩೫ ॥

ಅರ್ಥ :- ಯಾವ ಮಾನವನು ಮಾತಾ-ಪಿತೃಗಳ ಸ್ನೇಹಪೂರಿತ ಕಾರ್ಯಗಳನ್ನು ನೋಡಿ ಕ್ರೋಧಗೊಳ್ಳುವನೋ, ಧರ್ಮಾತ್ಮರಾದ ಸಹೋದರರಲ್ಲಿರುವ ಪರಸ್ಪರ ಪ್ರೇಮವನ್ನು, ಅನುರಾಗವನ್ನು ನೋಡಿ ಕೋಪಿಷ್ಠನಾಗುವನೋ, ಘೋರ ದುಃಖವನ್ನುಂಟುಮಾಡುವ ಈರ್ಷ್ಯೆ, ದ್ವೇಷ, ಮೊದಲಾದವುಗಳನ್ನು ಕಂಡು ಸಂತುಷ್ಟನಾಗುವ ಮಾನವನು ಮೇಲೆ ವಿವರಿಸಿದ ಪಾಪ ಭಾವನೆಯ ಫಲವಾಗಿ ಪುತ್ರ-ಪೌತ್ರಾದಿಗಳ ವಿಯೋಗದುಃಖವನ್ನು ಅನುಭವಿಸುವನು.

ಭಾವಾರ್ಥ :- ಅನಾದಿಕಾಲದಿಂದ ಜೀವಗಳು ಮೋಹನೀಯ ಕರ್ಮಗಳ ಪ್ರಭಾವದಿಂದ ಮಾತಾ-ಪಿತೃ, ಬಂಧು-ಬಾಂಧವ, ಪುತ್ರ ಮೊದಲಾದ ಕುಟುಂಬ ಜನರಲ್ಲಿ ಪ್ರೇಮಬಂಧವು ಉದ್ಭವಿಸುವುದು. ಅದರ ಪ್ರಭಾವದಿಂದಲೇ ತನ್ನ-ಯಾವನಾದರೊಬ್ಬನ ವಿಯೋಗವಾದೊಡನೆ ಜೀವನು ದುಃಖಿಯಾಗುವುದು ಸ್ವಾಭಾವಿಕವಾಗಿರುತ್ತದೆ. ಇವೆಲ್ಲವುಗಳಿಗಿಂತ ಪುತ್ರ ವಿಯೋಗ ದುಃಖವು ವಿಶೇಷರೂಪವಾಗಿ ದುಃಖವನ್ನುಂಟು ಮಾಡುವಂಥಾದ್ದಾಗಿರುತ್ತದೆ. ಧರ್ಮಾತ್ಮ ಪುರುಷರಲ್ಲಿರುವ ಪ್ರೇಮವು ಮೋಹರೂಪವಾಗಿ



ರುವುದಿಲ್ಲ. ಅದು ಧರ್ಮಾನುರಾಗದಿಂದುಂಟಾಗುವುದು. ಅಂತಹ ಧರ್ಮಾನುರಾಗವನ್ನು ಕಂಡು ಕೋಪಗೊಳ್ಳುವುದು, ಅವರಲ್ಲಿ ದ್ವೇಷ, ಅಸೂಯೆ ಮೊದಲಾದ ವಿಕಾರಗಳು ಹರಡುವಂತೆ ಪ್ರಯತ್ನಿಸುವುದು ಮಹಾಪಾಪಕ್ಕೆ ಕಾರಣೀಭೂತವಾಗಿರುತ್ತದೆ. ಅಂತಹ ಪಾಪಕರ್ಮದ ಫಲದಿಂದಲೇ ಪುತ್ರ-ಪೌತ್ರವಿಯೋಗ ದುಃಖವು ಅನುಭವಿಸಬೇಕಾಗುತ್ತದೆ. ಹೀಗೆ ಯಾರು ಪರಸ್ಪರ ಅನ್ಯರ ಜಗಳ, ಕಲಹ, ದ್ವೇಷಾದಿಗಳನ್ನು ಕಂಡು ಸಂತೋಷಪಡುವುದು ಕೂಡಾ ಮಹಾ ಘೋರ ದುಃಖಕ್ಕೆ ಕಾರಣವಾಗಿರುತ್ತದೆ. ಪರಲೋಕದಲ್ಲಿ ಇಂತಹ ವಿಯೋಗಜನ್ಯ ದುಃಖಗಳನ್ನನುಭವಿಸಬೇಕಾಗುವುದು. ಆದ್ದರಿಂದ ಮಾತಾ-ಪಿತೃಗಳ ಪ್ರೇಮ ಭಾವನೆಯಲ್ಲಿಯೂ, ಧರ್ಮಾತ್ಮರ ಧರ್ಮಾನುರಾಗದಲ್ಲಿಯೂ ಎಂದಿಗೂ ವಿಘ್ನ, ತೊಂದರೆಗಳನ್ನುಂಟುಮಾಡಬಾರದು.

ಇನ್ನು ಮುಂದಕ್ಕೆ ಅಣ್ಣ-ತಮ್ಮಂದಿರಲ್ಲಿ ವಿರೋಧವುಂಟಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ನಾನ್ಯತ್ಪ್ರಿಯಂ ಬಂಧುಸಮಂ ಹಿ ವಸ್ತು ।
ಕಥಂ ಪುನಸ್ತ್ಯಾಸ್ತಿ ಮಿಥೋ ವಿರೋಧಃ ॥

ಅರ್ಥ :- ಹೇ ಸ್ವಾಮಿನ್ ! ಈ ಸಂಸಾರದಲ್ಲಿ ಸಹೋದರರಿಗೆ ಸಮಾನವಾದ ಬೇರೆ ಯಾವ ವಸ್ತುವಿಲ್ಲವು. ಹೀಗಿದ್ದರೂ ಕೂಡಾ ಅಣ್ಣ-ತಮ್ಮಂದಿರಲ್ಲಿ ವಿರೋಧಭಾವನೆಯುಂಟಾಗಲು ಯಾವ ಪಾಪಕರ್ಮದ ಫಲವೆಂಬುದನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು.

ಉತ್ತರ :- ಮಿಥಃ ಸ್ವಬಂಧೋಃ ಪಶುಪಕ್ಷಿಕಾಣಾಂ ।
ಯಃ ಕಾರಯಿತ್ವಾ ಕಲಹಂ ವಿಷಾದಂ ॥
ಕೃತ್ವೇತ್ಯತುಷ್ಯತ್ ಸ್ವಜನಾಪಮಾನಂ ।
ತಸ್ಮಾನ್ನ ಜೀವಸ್ಯ ಭವೇದ್ವಿರೋಧಃ ॥ ೩೬ ॥

ಅರ್ಥ :- ಯಾರು ಅಣ್ಣ-ತಮ್ಮಂದಿರಲ್ಲಿಯೂ, ಪಶು-ಪಕ್ಷಿಗಳಲ್ಲಿಯೂ; ಪರಸ್ಪರ ಜಗಳ, ಕಲಹ, ದುಃಖವನ್ನುಂಟುಮಾಡಿ ಪ್ರಸನ್ನಚಿತ್ತನಾಗು

ತ್ತಾನೆಯೋ ಅಥವಾ ತನ್ನ ಬಂಧು-ಬಾಂಧವರನ್ನು ಅಪಮಾನಗೊಳಿಸು ವನೋ ಆ ಮಾನವನು ಮರಣವನ್ನು ಹೊಂದಿ ಪರಜನ್ಮದಲ್ಲಿ ತನ್ನ ಬಂಧು ಬಾಂಧವರೊಡನೆ ವಿರೋಧ, ವೈರವನ್ನೇ ಸಾಧಿಸಿಕೊಂಡಿರುತ್ತಾನೆ.

ಭಾವಾರ್ಥ :- ವೈರ, ಶತ್ರುತ್ವಾದಿ ದುಃಸಂಸ್ಕಾರಗಳು ಜನ್ಮಜನ್ಮಾಂತರಗಳಲ್ಲಿಯೂ ತಮ್ಮ ದುಷ್ಟಭಾವವನ್ನು ಬೀರುತ್ತವೆ. ಇದು ಪರಸ್ಪರ ಕ್ರೋಧದಿಂದಲೂ, ವಿರೋಧ ವೈರಭಾವನೆಯಿಂದಲೂ, ಚಾರಿತ್ರ ಮೋಹನೀಯಕರ್ಮದ ಬಂಧವಾಗುತ್ತದೆ. ಅದರ ಉತ್ಕೃಷ್ಟಸ್ಥಿತಿಯು ನಲವತ್ತು ಕೋಟಾಕೋಟಿ ಸಾಗರವಾಗಿರುತ್ತದೆ. ಅರ್ಥಾತ್ ಅಭಾದಕಾಲವನ್ನು ಬಿಟ್ಟು ಇಷ್ಟದಿನಗಳಲ್ಲಿ ಆ ಕರ್ಮವು ತನ್ನ ಫಲವನ್ನು ಕೊಡುತ್ತಿರುತ್ತದೆ. ಇಷ್ಟು ದಿವಸಗಳವರೆಗೆ ಈ ಜೀವನು ಎಷ್ಟು ಜನ್ಮಗಳನ್ನು ಧಾರಣೆ ಮಾಡುತ್ತದೆಯೋ ಅವೆಲ್ಲವುಗಳಲ್ಲಿ ಒಂದು ಸರ್ತಿ ಬಂಧಿಸಿಕೊಂಡಿರುವ ಕರ್ಮಫಲವು ಈ ಜೀವನಿಗೆ ಪ್ರಾಪ್ತವಾಗಿರುತ್ತದೆ. ನೋಡಿರಿ ! ಕಮಠನು ತನ್ನ ಸಹೋದರನೊಡನೆ ವಿರೋಧ, ಅನ್ಯಾಯಗೈದ. ಆ ವಿರೋಧವು ಕಮಠನ ಪರ್ಯಾಯದಿಂದ ಹಿಡಿದು ಎಷ್ಟೋ ಭವಗಳಲ್ಲಿ ಸಾಧಿಸಿಕೊಂಡು ಬಂದದ್ದು. ಹಾಗೆ ಅಂತ್ಯದಲ್ಲಿ ಭಗವಾನ್ ಪಾರ್ಶ್ವನಾಥರು ಮೋಕ್ಷಪಡೆದ ನಂತರವೇ ಆ ವಿರೋಧವು ಬಿಟ್ಟುಹೋಯಿತು. ಇದೆಲ್ಲವನ್ನು ತಿಳಿದು ಯಾವ ಭವ್ಯಜೀವಗಳು ಪರಸ್ಪರ ವೈರ, ವಿರೋಧಭಾವನೆ ಮತ್ತು ಕಾರ್ಯಗಳನ್ನು ಮಾಡದಿರುವುದೇ ಆತ್ಮ ಕಲ್ಯಾಣದ ಸರಳ ಉಪಾಯವಾಗಿದೆ.

ಇನ್ನು ಮುಂದಕ್ಕೆ ತಾಯಿ-ಮಕ್ಕಳಲ್ಲಿ ವಿರೋಧವುಂಟಾಗಲು ಕಾರಣ ವನ್ನು ಹೇಳುತ್ತಾರೆ.

ಪ್ರಶ್ನೆ :- **ಕರ್ಮೋದಯಾತ್ಸ್ಯಾದ್ ವದ ದೇವ ಕಸ್ಮಾದ್ ।**
**ಮಾತುಃ ಸುಪುತ್ರಸ್ಯ ಮಿಥೋ ವಿರೋಧಃ ॥**

ಅರ್ಥ :- ಹೇ ದೇವ ! ಯಾವ ಕರ್ಮವಿಧಿಯಿಂದ ಉತ್ತಮ ಪುತ್ರನು ತನ್ನ ತಾಯಿಯೊಡನೆ ವಿರೋಧ, ವೈರತ್ವಾದಿಗಳನ್ನು ಮಾಡುವನೆಂಬುದನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು.



ಉತ್ತರ :- ಮಾತುಃ ಸುಪುತ್ರಸ್ಯ ಮಿಥೋ ವಿರೋಧಂ ।
ಯಃ ಕಾರಯಿತ್ವಾ ವಿಷಮಾಪ ಮಾನಾತ್ ॥
ಮಾತುಶ್ಚ ತುಷ್ಯೇದ್ ವಿದುಷೋಽಪಿ ಸೂನೋ-
ರ್ಮಾತ್ರಾ ಸಮಂ ತಸ್ಯ ಮಿಥೋ ವಿರೋಧಃ ॥ ೩೭ ॥

ಅರ್ಥ :- ಯಾವ ಮಾನವನು ತಾಯಿ-ಮಕ್ಕಳಲ್ಲಿ ವಿರೋಧವನ್ನುಂಟು ಮಾಡುವನೋ, ಅವರನ್ನು ಅಪಮಾನಕ್ಕೆ ಗುರಿಪಡಿಸಿ ಸಂತೋಷಪಡುವನೋ ಅಥವಾ ಪ್ರಸಿದ್ಧ ವಿದ್ವಾಂಸ ಅನ್ಯ ಪುತ್ರನಿಗೆ ಸಂಭವಿಸಿದ ಅಪಮಾನದಿಂದ ಪ್ರಸನ್ನಚಿತ್ತವುಳ್ಳವನಾಗುವನೋ, ಅವನು ಪರಲೋಕದಲ್ಲಿ ಜನಿಸಿ ತನ್ನ ತಾಯಿಯೊಡನೆ ವಿರೋಧವನ್ನೇ ಸಾಧಿಸಿಕೊಳ್ಳುವವನಾಗುತ್ತಾನೆ.

ಭಾವಾರ್ಥ :- ಯಾವ ಜೀವನು ಎಂತಹ ಕಾರ್ಯಗಳನ್ನು ಮಾಡುವನೋ ಆತನಿಗೆ ಅದೇ ತರಹದ ಫಲಗಳು ಲಭಿಸುವವು. ಈ ಸಂಸಾರದಲ್ಲಿ ತಂದೆ-ತಾಯಿಗಳು ಪೂಜ್ಯರು, ಗುರುಗಳು ಸದಾಕಾಲವೂ ಆದರ ಸತ್ಕಾರಗಳಿಗೆ ಪಾತ್ರರು. ಮಾತ್ರವಲ್ಲ; ಅವರ ಸೇವೆ, ಶುಶ್ರೂಷೆಯನ್ನು ಮಾಡಿಕೊಂಡಿರಬೇಕು. ಆದರೆ ಯಾವ ಪುರುಷನು ತನ್ನ ತಂದೆ-ತಾಯಿಗಳೊಡನೆ ಜಗಳ, ಕಲಹಗಳನ್ನಾಡಿಕೊಂಡು ದುಃಖದಿಂದ ಸಂತುಷ್ಟನಾಗುತ್ತಾನೆಯೋ ಅಥವಾ ತನ್ನ ಪಂಡಿತ ಪುತ್ರನಲ್ಲಿ ಪ್ರೇಮದಿಂದಿರದೆ ಕೇವಲ ವೈರವನ್ನೇ ಬೆಳಸಿಕೊಂಡಿರುತ್ತಾನೆಯೋ, ಅವನು ಮರಣಾನಂತರವು ಪರಲೋಕದಲ್ಲಿ ಜನ್ಮತಾಳಿ ಜಗಳಗಂಟನಾಗಿಯೇ ಆಗುವನು. ಅಷ್ಟೇ ಅಲ್ಲ; ಸರ್ವರೂ ಅವನೊಡನೆ ಶತ್ರುತ್ವ, ಕಲಹ, ಜಗಳವಾಡಿಕೊಂಡೇ ಇರುತ್ತಾರೆ. ಅಂತಹ ಜೀವನು ಸತ್ತು ಯಾರಿಗಾದರು ತಾಯಿಯಾಗಿ ಜನಿಸಿದರೂ ಅವಳು ತನ್ನ ಶ್ರೇಷ್ಠ ಸುಪುತ್ರನೊಡನೆ ಜಗಳವಾಡಿಕೊಂಡಿರುವಳು. ಆದ್ದರಿಂದ ಯಾವ ಭವ್ಯಜೀವಿಗಳು ಯಾರೊಡನೆಯೂ ವಿರೋಧವನ್ನು ಸಾಧಿಸಬಾರದು. ಇದೇ ಆತ್ಮಸುಖದ ಸರಳ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಸ್ತ್ರೀಯ ಗರ್ಭದಲ್ಲಿ ನಿರ್ಭಾಗ್ಯನಾದ ಪುತ್ರನು ಜನಿಸುವುದೆಂಬುದನ್ನು ಹೇಗೆ ತಿಳಿಯಲು ಸಾಧ್ಯವೆಂಬುದನ್ನು ಸ್ಪಷ್ಟೀಕರಿಸುತ್ತಾರೆ.

ಪ್ರಶ್ನೆ :- ಸುಭಾಗ್ಯಹೀನೋ ಹ್ಯುದರೇಽಸ್ತಿ ಪುತ್ರಃ ।
ಕಥಂ ಪ್ರಭೋ ! ಜ್ಞಾಯತ ಏವ ನಾರ್ಯಾ ॥

ಅರ್ಥ :- ಹೇ ಪ್ರಭೋ ! ಕೃಪೆದೋರಿ ಯಾವುದೇ ಸ್ತ್ರೀಯ ಗರ್ಭದಲ್ಲಿ ಭಾಗ್ಯಹೀನನಾದ ಪುತ್ರನು ಜನಿಸುವನೆಂಬುದನ್ನು ಹೇಗೆ ತಿಳಿಯಲು ಸಾಧ್ಯವು ಎಂಬುದನ್ನು ವಿವರಿಸಬೇಕು.

ಉತ್ತರ :- ಮಾತುಶ್ಚ ಯಸ್ಯಾ ಗಮನಾತ್ಸುಗರ್ಭ ।
ಹ್ಯಾಪನ್ನಿಥಃ ಸ್ಯಾ ತ್ಸುಮತಿಃ ಪಿತುಶ್ಚ ॥
ಅಭಕ್ಷ ಭಕ್ಷೇಚ ಭವೇದ್ಧಿ ಭಾವೋ ।
ಹೀತ್ಯಾದಿ ಚಿನ್ಹೈಸ್ತನಯೋ ಹ್ಯಭಾಗ್ಯಃ ॥ ೩೮ ॥

ಅರ್ಥ :- ಯಾವನಾದರೊಬ್ಬ ಜೀವನು ಯಾವಳಾದರೊಬ್ಬ ಸ್ತ್ರೀಯ ಗರ್ಭದಲ್ಲಿ ಬಂದೊಡನೆ ಆ ತಾಯಿಯ ಮೇಲೆ ನಾನಾ ಆಪತ್ತಿಗಳು, ಸಂಕಷ್ಟಗಳು ಸಂಭವಿಸುವಿಕೆ, ತಂದೆಯಾದವನಿಗೆ ಹುಚ್ಚುಹಿಡಿಯುವಿಕೆ, ಅಥವಾ ಮಾತಾಪಿತೃಗಳ ಬುದ್ಧಿಯು ಅಭಕ್ಷವಸ್ತುಗಳನ್ನು ಸೇವಿಸಬೇಕೆಂದು ತೋರುವಿಕೆಯೂ ಪಾಪಕಾರ್ಯಗಳಲ್ಲಿ ಮನಸ್ಸುಂಟಾಗುವಿಕೆಯೂ, ಇವೇ ಮೊದಲಾದ ಲಕ್ಷಣಗಳಿಂದ ಗರ್ಭದಲ್ಲಿ ನಿರ್ಭಾಗ್ಯನಾದ ಪುತ್ರನೇ ಜನಿಸುವನೆಂಬುದನ್ನು ನಿಶ್ಚಯಿಸಿಕೊಳ್ಳಬೇಕು.

ಭಾವಾರ್ಥ :- ಗರ್ಭದಲ್ಲಿ ಜನಿಸುವ ಪುತ್ರನ ಸ್ವಭಾವದಂತೆ ಮಾತಾಪಿತೃಗಳ ಪರಿಣಾಮವೂ ಕೂಡಾ ಅದೇ ಸ್ವಭಾವದ ಪರಿಣಾಮವು ಉದ್ಭವಿಸುವುದು. ವಿಶೇಷವಾಗಿ ಮಾತೆಯ ಭಾವನೆಯೇ ಪ್ರಧಾನವಾದುದು. ಒಂದು ವೇಳೆ ಗರ್ಭದಲ್ಲಿ ಧರ್ಮಾತ್ಮನಾದ ಪುತ್ರನ ಜನನವಾಗುವುದಿದ್ದರೆ ತಾಯಿಗೆ ತೀರ್ಥಯಾತ್ರಾ, ದರ್ಶನ, ಜಿನಪೂಜನ, ಮುನಿದರ್ಶನ, ಸತ್ಪಾತ್ರದಾನ ಮೊದಲಾದ ಕಾರ್ಯಗಳನ್ನು ಮಾಡಬೇಕೆಂಬ ಭಾವನೆಗಳುಂಟಾಗುವಿಕೆಯೂ, ಗರ್ಭದಲ್ಲಿ ವೀರಪುತ್ರನ ಜನನವಾಗುವುದಿದ್ದರೆ ತಾಯಿಗೆ ಶತ್ರುಗಳನ್ನು ಜಯಿಸಬೇಕೆಂಬ ಪರಿಣಾಮಗಳುದ್ಭವಿಸುವಿಕೆಯೂ ಮತ್ತು ಗರ್ಭದಲ್ಲಿ ದರಿದ್ರಪುತ್ರನ ಜನನವಾಗುವುದಿದ್ದರೆ ತಾಯಿಯ ಪರಿಣಾಮವು ದರಿದ್ರ



ರೂಪವಾಗಿಯೂ, ಅಭಕ್ಷ್ಯ ಪದಾರ್ಥಗಳನ್ನು ಭಕ್ಷಿಸಬೇಕೆಂಬಾಸೆಯು ಮತ್ತು ಹಳೆವಸ್ತ್ರ, ಹರಕುವಸ್ತ್ರಗಳನ್ನು ಧರಿಸಬೇಕೆಂಬ ಪರಿಣಾಮವುಂಟಾಗುವಿಕೆಯೂ, ಹೀಗೆ ಗರ್ಭವತಿಯಾದ ಸಮಯದಲ್ಲಿ ತಾಯಿಯ ಪರಿಣಾಮಗಳಿದ್ದಂತೆ ಜನಿಸುವ ಪುತ್ರನು ಭಾಗ್ಯಾಭಾಗ್ಯಗಳನ್ನು ತಿಳಿಯಬಹುದು. ಇದು ಭಾವೀಸೂಚಕದ ಕೈಗನ್ನಡಿಯಾಗಿರುತ್ತದೆ.

ಇನ್ನು ಮುಂದಕ್ಕೆ ತಂದೆ-ಮಕ್ಕಳ ವಿರೋಧಕ್ಕೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಪಿತುಃ ಸುಪುತ್ರಸ್ಯ ಮಿಥಶ್ಚ ವೈರಮ್ ॥

ಅರ್ಥ :- ಹೇ ಭಗವಾನ್ ! ಯಾವ ಪಾಪಕರ್ಮದ ಉದಯದಿಂದ ತಂದೆಯಾದವನು ಮಗನೊಡನೆ ವೈರ, ವಿರೋಧವನ್ನು ಮಾಡುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಯಃ ಕಾರಯಿತ್ವಾ ವಿಷಮಂ ವಿವಾದಂ ।
ಪಿತ್ರಾಸಮಂ ಪುತ್ರಕಲಂ ಚ ದೃಷ್ಟ್ವಾ ॥
ತುಷ್ಯೇನ ಕುರ್ಯಾದ್ವಿನಯಂ ಗುರೋಶ್ಚ ।
ಪಾಪಾದಮುಷ್ಮಾಚ್ಚ ಮಿಥೋ ವಿರೋಧೀ ॥ ೩೯ ॥

ಅರ್ಥ :- ಯಾವನು ವಾದವಿವಾದಗಳನ್ನು ಮಾಡಿಕೊಂಡಿರುತ್ತಾನೆಯೋ, ತಂದೆ-ಮಕ್ಕಳು ಜಗಳವಾಡುತ್ತಿರುವುದನ್ನು ಕಂಡು ಸಂತೋಷಪಡುವಿಕೆಯೂ ಮತ್ತು ಗುರುಜನರ ಅವಿನಯ ತಿರಸ್ಕಾರಾದಿಗಳನ್ನು ಮಾಡಿರುವ ಪಾಪಕರ್ಮದ ಉದಯದಿಂದ ಪರಸ್ಪರ ವೈರ, ವಿರೋಧಗಳು ಉತ್ಪನ್ನವಾಗುವವು.

ಭಾವಾರ್ಥ :- ಯಾವ ಪುರುಷನು ತನ್ನ ತಾಯಿ, ತಂದೆ, ಗುರುಗಳೊಡನೆ ವಿರೋಧಿಯಾಗಿ ಅವಿನಯನಾಗಿರುವನೋ, ಸದಾಕಾಲವು ವಾದ-ವಿವಾದಗಳನ್ನು ಮಾಡಿಕೊಂಡಿರುತ್ತಾನೆಯೋ, ತಂದೆ-ಮಕ್ಕಳ ಕಲಹ, ಜಗಳಗಳನ್ನು ಕಂಡು ಆನಂದಭರಿತನಾಗಿರುತ್ತಾನೆಯೋ ಅಥವಾ ಅಂತಹ

ಕಾರ್ಯಗಳನ್ನು ಚಿಂತಿಸಿಕೊಂಡಿರುತ್ತಾನೆಯೋ, ಆ ಪುರುಷನು ಸತ್ತು ಪರಜನ್ಮದಲ್ಲಿ ತನ್ನ ತಂದೆಯೊಡನೆ, ಗುರುಗಳೊಡನೆ ಮತ್ತು ಪುತ್ರ, ಶಿಷ್ಯರೊಡನೆ ಸದಾ ಕಾಲವೂ ಕಲಹ, ಜಗಳವಾಡಿಕೊಂಡಿರುತ್ತಾನೆ. ಆದ್ದರಿಂದ ಯಾರೊಡನೆಯೂ ಜಗಳ, ಕಲಹಗಳನ್ನಾಡದಿರುವುದೆ ಸುಖ-ಶಾಂತಿಯ ಮಾರ್ಗವಾಗಿರುತ್ತದೆ.

ಮುಂದಕ್ಕೆ ಕುಂಟನಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ಕಸ್ಮಾತ್ ।
ಪಾದೇನ ಖಂಜೋ ಭವತೀಹ ಜೀವಃ ॥

ಅರ್ಥ :- ಹೇ ದಯಾಸಿಂಧೋ ! ಯಾವ ಕರ್ಮದ ಉದಯದಿಂದ ಈ ಜೀವನು ಕುಂಟನಾಗಿ ಜನಿಸುವನೆಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಉತ್ತರ :- ಛಿನ್ನೌ ಪರೇಷಾಂ ಚರಣೌ ಚ ಹಸ್ತೌ ।
ಯೇನಾಸ್ತ್ರ ಶಸ್ತ್ರೈಃ ಕರಣೇಽಪಿ ನೇತ್ರೇ ॥
ಮಾನಾದಪಾಂಗಂ ಚ ತಿರಸ್ಕರೋತಿ ।
ಪಾದೇನ ಖಂಜೋ ಭವತೀಹ ಜೀವಃ ॥ ೪೦ ॥

ಅರ್ಥ :- ಯಾವ ಪುರುಷನು ಅಸ್ತ್ರ-ಶಸ್ತ್ರಾದಿ ಆಯುಧಗಳಿಂದ ಪರ ಜೀವಗಳ ಕೈಕಾಲುಗಳನ್ನು, ಕಿವಿಗಳನ್ನು, ಕತ್ತರಿಸುವುದು, ಕಣ್ಣುಗಳನ್ನು ಕೀಳುವುದು ಅಥವಾ ತನ್ನ ದುರಹಂಕಾರಕ್ಕೆ ವಶೀಭೂತನಾಗಿ ಕೈಕಾಲುಗಳಿಲ್ಲದ ಅಪಾಂಗಿಗಳನ್ನು ಕಂಡು ಧಿಕ್ಕರಿಸುವುದು, ತಿರಸ್ಕರಿಸುವುದು ಇವೇ ಮೊದಲಾದ ನೀಚಕೃತಿಗಳನ್ನು ಮಾಡುವ ಮಾನವನು ಮರಣಾನಂತರ ಪುನರ್ಜನ್ಮದಲ್ಲಿ ವಿಕಲಾಂಗನಾಗಿಯೇ ಜನಿಸುವನು.

ಭಾವಾರ್ಥ :- ಹಸ್ತ ಪಾದಾದಿಗಳು ಕತ್ತರಿಸಲ್ಪಡುವವನಿಗೆ ಅಪಾರ ದುಃಖವಾಗುತ್ತಿರುತ್ತದೆ. ಸಂಚರಿಸಲು, ಕೆಲಸಕಾರ್ಯಗಳನ್ನು ಮಾಡಲು ಆಗುವುದಿಲ್ಲವು. ಹಣ ಸಂಪಾದಿಸಲು ಕೂಡಾ ಆಗಲಾರದು. ಅಂತಹವನು



ಪ್ರತಿ ಸಮಯದಲ್ಲಿ ದುಃಖಿತನಾಗಿರುತ್ತಾನೆ. ಅಂತಹ ಕಷ್ಟಪಡುವ ಜೀವಗಳನ್ನು ಕಂಡು ಧಿಕ್ಕರಿಸುವವನು ಕೂಡಾ ಸತ್ತು ಪರಲೋಕದಲ್ಲಿ ಜನಿಸಿ ಕೈ-ಕಾಲುಗಳಿಲ್ಲದವನಾಗಿ ಘೋರ ದುಃಖಕ್ಕೆ ಗುರಿಯಾಗುತ್ತಿರುವವನಾಗುತ್ತಾನೆ. ಆದ್ದರಿಂದ ಇದೆಲ್ಲವನ್ನು ತಿಳಿದು ವಿಚಾರಿಸಿ ಎಂದೆಂದಿಗೂ ಯಾವ ಜೀವಗಳಿಗೂ ಯಾವರೀತಿಯ ದುಃಖವನ್ನೂ ಉಂಟುಮಾಡಬಾರದು. ತನ್ನಂತೆ ಸರ್ವರೂ ಸುಖದಿಂದಿರುವಂತೆ ಪ್ರಯತ್ನಿಸುವುದೇ ಆತ್ಮಶಾಂತಿಯ ಸುಲಭ ಮಾರ್ಗವಾಗಿರುತ್ತದೆ.

ಮುಂದಕ್ಕೆ ನರಕದುಃಖಕ್ಕೆ ಭಾಗಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಸ್ಯಾಚ್ಛ್ವಭ್ರಗಾಮಿ ಮನುಜಶ್ಚ ಮೃತ್ವಾ ॥

ಅರ್ಥ :- ಹೇ ಸ್ವಾಮಿನ್ ! ಈ ಜೀವನು ಯಾವ ಪಾಪಕರ್ಮದ ತೀವ್ರ ಉದಯದಿಂದ ಸತ್ತು ನರಕದಲ್ಲಿ ಜನಿಸುವನೆಂಬುದನ್ನು ಅಪ್ಪಣೆಕೊಡಿಸಬೇಕು.

ಉತ್ತರ :- ಅತ್ಯಂತ ಕೋಪಾದಸುಹಿಂಸನಾದ್ವಾ ।
ದೇವಸ್ಯ ಧರ್ಮಸ್ಯ ಗುರೋರ್ವಿರೋಧಾತ್ ॥
ಬಂಧೋಃ ಸಮಂ ವೈರ ವಿರೋಧಯೋಗಾತ್ ।
ಸ್ಯಾತ್ಪಾಪಮೂರ್ತಿರ್ನರಕಗಾಮೀ ॥ ೪೧ ॥

ಅರ್ಥ :- ಯಾವ ಮನುಷ್ಯನು ಕೋಪಿಷ್ಠನಾಗಿ ಪ್ರಾಣಿಗಳನ್ನು ಘಾತಿಸುವನೋ, ದೇವ, ಗುರು, ಧರ್ಮವಿರೋಧಿಯಾಗಿರುವನೋ, ತನ್ನ ಸಹೋದರರೊಡನೆ ವೈರಶತ್ರುತ್ವವನ್ನೇ ಮಾಡಿಕೊಂಡಿರುತ್ತಾನೆಯೋ ಆ ಪಾಪಮೂರ್ತಿ ಮಾನವನು ನಿಶ್ಚಯವಾಗಿ ನರಕಭೂಮಿಯಲ್ಲಿಯೇ ಜನಿಸುವನು.

ಭಾವಾರ್ಥ :- ಕ್ರೋಧವು ಪಾಪದ್ವಾರದ ಬೀಗದಕೈಯಾಗಿದೆ. ಕ್ರೋಧದಿಂದ ಇಹಲೋಕದಲ್ಲಿ ಅನೇಕ ಅನರ್ಥಗಳೂ, ನಾನಾ ಜೀವಗಳ ಘಾತವೂ ಆಗುವುದು. ಕ್ರೋಧದಿದ್ಯುಕ್ತನಾದವನು ತಾಯಿ, ತಂದೆ, ಪುತ್ರ, ಸ್ತ್ರೀ ಮೊದಲಾದವರನ್ನು ಘಾತಿಸಲು ಹಿಂಜರಿಯಲಾರನು. ಅಷ್ಟೇ ಅಲ್ಲ;

ಧರ್ಮಾತ್ಮರಾದವರನ್ನು ವಧಿಸಲು ಸಿದ್ಧನಾಗುತ್ತಾನೆ. ಇಂತಹ ಮಹಾ ಪಾಪೀ ಮಾನವನು ನಾರಕೀಯಾಗಿಯೇ ಜನಿಸುವನು. ಇದೇ ಪ್ರಕಾರವಾಗಿ ಧರ್ಮ, ದೇವ, ಗುರುಗಳಲ್ಲಿ ವಿರೋಧವನ್ನು ಸಾಧಿಸುವುದರಿಂದಲೂ, ಮಹಾ ಪಾಪ ಬಂಧಕ್ಕೆ ಕಾರಣೀಭೂತನಾಗುತ್ತಾನೆ. ಈ ಮೂರು ವಿಧ ಧರ್ಮರತ್ನಗಳು ಸಕಲ ಜೀವರಾಶಿಗಳ ಕಲ್ಯಾಣಕಾರಕಗಳಾದ ವಸ್ತುಗಳಾಗಿವೆ. ಸಾಕ್ಷಾತ್ ಮೋಕ್ಷದ ಮಾರ್ಗದರ್ಶಕರೂ ಆಗಿರುತ್ತಾರೆ. ಅವರು ವೀತರಾಗಿಗಳಾಗಿರುವುದರಿಂದ ವೀತರಾಗತೆಯ ಉಪದೇಶವನ್ನೇ ಮಾಡುತ್ತಾರೆ. ಅಂತಹ ಪರಮ ಕಲ್ಯಾಣಮಯ ಸದ್ಗುರುಗಳೊಡನೆ ವಿರೋಧಗೈಯುವುದು, ಅಪಮಾನಗೊಳಿಸುವುದು, ಅವರ ಆಜ್ಞೋಲ್ಲಂಘನ ಮಾಡುವುದು, ಇವೆಲ್ಲವೂ ಘೋರ ಪಾಪಕರವಾದವು. ಆ ಪಾಪದ ಫಲವು ನರಕದುಃಖವೇ ಆಗಿರುತ್ತದೆ. ಇದೇ ರೀತಿಯಾಗಿ ತನ್ನ ಸಹೋದರರೊಡನೆ, ಧರ್ಮಬಂಧುಗಳೊಡನೆಯೂ ಈರ್ಷೆ, ಅಸೂಯೆ ಮತ್ತು ವಿರೋಧ ಇಟ್ಟುಕೊಳ್ಳುವುದು ಅಧರ್ಮಿ ಪಾತಕಿಗಳ ದುಷ್ಟ ಸ್ವಭಾವವಾಗಿರುತ್ತದೆ. ಅಂತಹ ಅಧರ್ಮಿಯರು ನಿಶ್ಚಯವಾಗಿಯೂ ನರಕಗತಿಯನ್ನೇ ಪಡೆಯುತ್ತಾರೆ. ಆದ್ದರಿಂದ ಈ ಪಾಪ ಕಾರ್ಯಗಳಿಂದ ದೂರವಿರುವುದೇ ಆತ್ಮಕಲ್ಯಾಣದ ಸುಲಭಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಕುಳ್ಳನಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾ - ।
ಜ್ಜೀವೋ ಭವೇದ್ ವಾಮನ ದೇಹಧಾರೀ ॥

ಅರ್ಥ :- ಹೇ ಪ್ರಭು ಈ ಜೀವನು ಯಾವ ಪಾಪಕರ್ಮದ ಉದಯದಿಂದ ವಾಮನರೂಪ(ಕುಳ್ಳ)ಶರೀರವನ್ನು ಧಾರಣೆಮಾಡುತ್ತಾನೆಂಬುದನ್ನು ಹೇಳಬೇಕು.

ಉತ್ತರ :- ಗರ್ವೇಣ ಯೋ ವಾಮನ ದೇಹನಿಂದಾಂ ।
ತಸ್ಯಾಪಮಾನಂ ನನು ತದ್ವಿಘಾತಂ ॥
ದುಃಖಂ ಪ್ರದಾತುಂ ಚ ಕರೋತಿ ಕಾಂಕ್ಷಾಂ ।
ಸ ಸ್ಯಾನ್ನರೋ ವಾಮನ ದೇಹಧಾರೀ ॥ ೪೨ ॥



ಅರ್ಥ :- ಯಾವ ಜೀವನು ತನ್ನ ಶರೀರ ಸುಂದರತೆಯ ಮದಾಂಧತೆಯಿಂದ ವಾಮನ ಶರೀರಧಾರಿಗಳಾದವರನ್ನು ನೋಡಿ ನಿಂದಿಸುವುದು, ಅಪಮಾನಿಸುವುದು ಮತ್ತು ದುಃಖವನ್ನುಂಟುಮಾಡುವುದು ಇವೇ ಮೊದಲಾದ ಪಾಪಭಾವನೆಯಿಂದ ಮುಂದಿನ ಭವದಲ್ಲಿ ವಾಮನನಾಗಿಯೇ ಜನಿಸುವನು.

ಭಾವಾರ್ಥ :- ಸಂಸ್ಥಾನಗಳು ಆರು. ಅವುಗಳಲ್ಲಿ ವಾಮನ ಸಂಸ್ಥಾನವೆಂಬುದು ಒಂದು. ಅದು ಮಹಾ ನಿಕೃಷ್ಟ ಸಂಸ್ಥಾನವಾಗಿರುತ್ತದೆ. ಯಾಕೆಂದರೆ ವಾಮನಶರೀರಧಾರೀ ಮಾನವನು ಯಾವ ವಿಶೇಷ ಕಾರ್ಯಗಳನ್ನು ಮಾಡಲಾರನು. ಆದರಿಂದಲೇ ಅದು ನಿಂದ್ಯಶರೀರವಾಗಿರುತ್ತದೆ. ಅಂಥವರ ನಿಂದೆಯನ್ನು, ಪರಿಹಾಸ್ಯವನ್ನು, ಅಪಮಾನವನ್ನು ಮಾಡುವುದು ಅವರನ್ನು ಹೊಡೆಯುವುದು ಅಥವಾ ಅವರನ್ನು ಪರಿಪರಿಯಾಗಿ ಪೀಡಿಸುವುದು ಇವೇ ಮೊದಲಾದ ಪಾಪಮನಸ್ಥಿತಿಯುಳ್ಳವನು ಮುಂದಿನ ಭವದಲ್ಲಿ ನಾನಾ ವಿಧ ದುಃಖ, ಪೀಡೆ, ಕಷ್ಟ-ನಷ್ಟಗಳಿಗೆ ಗುರಿಯಾಗುವನು. ಆದ್ದರಿಂದ ಪರನಿಂದೆ, ಅಪಮಾನ, ಹಾಸ್ಯಾದಿಗಳನ್ನು ಮಾಡದಿರುವುದೇ ಶಾಂತಿ, ಸಮಾಧಾನದ ಹೆದ್ದಾರಿಯಾಗಿರುತ್ತದೆ.

ಮುಂದಕ್ಕೆ ಪಶುಯೋನಿಯಲ್ಲಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ಕಸ್ಮಾದ್ ।
ಯೋನ್ಯಾಂ ಪಶೋರ್ಜಾಯತ ಏವ ಜೀವಃ ॥

ಅರ್ಥ :- ಹೇ ಭಗವಾನ್ ! ಈ ಸಂಸಾರೀ ಜೀವನು ಯಾವ ಪಾಪ ಕರ್ಮದ ಉದಯದಿಂದ ಪಶುಯೋನಿಯಲ್ಲಿ ಜನಿಸುವುದೆಂಬುದನ್ನು ದಯವಿಟ್ಟು ವಿವರಿಸಿರಿ.

ಉತ್ತರ :- ಸ್ವಾಚಾರ ಹೀನಸ್ಯ ಕರೋತಿ ಶಂಸಾಂ ।
ವರ್ಜ್ಯಾಶನಂ ವಾ ಗುರುದೇವ ನಿಂದಾಂ ॥
ಭಾರಾಧಿಕಂ ಜೀವ ಜಲಾನ್ನರೋಧಂ ।
ಯೋನ್ಯಾಂ ಪಶೋರ್ಜಾಯತ ಏವ ಕೌ ಸಃ ॥ ೪೩ ॥

ಅರ್ಥ :- ದುರಾಚಾರಿಗಳನ್ನು ಪ್ರಶಂಸಿಸುವುದು ಅಭಕ್ಷ ಭಕ್ಷಕನಾಗುವುದು. ದೇವ, ಶಾಸ್ತ್ರ, ಗುರುಗಳನ್ನು ನಿಂದಿಸುವುದು, ಮೂಕಪ್ರಾಣಿಗಳ ಮೇಲೆ ಅಧಿಕ ಭಾರವನ್ನು ಹೊರಿಸುವುದು, ಅವುಗಳಿಗೆ ಸಮಯ ಸಮಯಕ್ಕೆ ಅನ್ನಪಾನಾದಿಗಳನ್ನು ಕೊಡದಿರುವುದು, ಇವೇ ಮೊದಲಾದ ನಿರ್ದಯ ಕಾರ್ಯಗಳನ್ನು ಮಾಡುವ ನಿರ್ದಯೀ ಮಾನವನು ತನ್ನ ಆಯುಷ್ಯಾವಸಾನವಾಗಿ ಮರುಭವದಲ್ಲಿ ಇದೇ ಭೂಮಿಯಲ್ಲಿ ಪಶುಯೋನಿಯಲ್ಲಿ ಜನಿಸುವನು.

ಭಾವಾರ್ಥ :- ಉತ್ತಮ ಆಚರಣೆಗಳ ಸ್ವರೂಪವನ್ನರಿಯದೆಯೂ, ಸದಾಚಾರಗಳನ್ನು ಧಾರಣೆ ಮಾಡುವುದಿಲ್ಲವೋ, ಅಂತಹ ಮಿಥ್ಯಾದೃಷ್ಟಿಯು ಆಚಾರಹೀನಮಾನವರನ್ನು ಬಾಯಿತುಂಬ ಹೊಗಳುತ್ತಿರುತ್ತಾನೋ, ಭಕ್ಷಿಸಲು ಯೋಗ್ಯವಲ್ಲದ ಕಂದಮೂಲಾದಿಗಳನ್ನು ಭಕ್ಷಿಸುವನೋ, ಅವುಗಳ ಶಕ್ತಿಮೀರಿ ಪ್ರಾಣಿಗಳ ಮೇಲೆ ಭಾರವನ್ನು ಹೊರಿಸುವುದು, ಶಕ್ತಿಮೀರಿ ಕೆಲಸವನ್ನು ಮಾಡಿಸುವುದು, ಸಮಯ ಸಮಯಕ್ಕೆ ಅನ್ನಪಾನಾದಿಗಳನ್ನು ಕೊಡದಿರುವಿಕೆಯೂ ಕೊಡುತ್ತಿದ್ದರೂ ಅತ್ಯಂತ ಅಲ್ಪ ಕೊಡುವಿಕೆಯೂ, ಉಷ್ಣ, ಶೀತಾದಿಗಳಿಂದ ರಕ್ಷಣೆಮಾಡದಿರುವಿಕೆಯೂ ಮತ್ತು ದೇವ, ಧರ್ಮ, ಶಾಸ್ತ್ರಗಳನ್ನು ನಿಂದಿಸಿಕೊಂಡಿರುವಿಕೆಯೂ, ಅವರ ಆಜ್ಞೆಯನ್ನುಲ್ಲಂಘಿಸುವಿಕೆಯೂ ಇವೇ ಮೊದಲಾದ ನಿಂದನೀಯ ಕೆಲಸಗಳನ್ನು ಮಾಡುವವನು ತನ್ನ ಮರಣಾನಂತರ ತಿರ್ಯಂಚ ಗತಿಯಲ್ಲಿ ಜನ್ಮತಾಳಿ ಪಡಬಾರದಕಷ್ಟಗಳನ್ನು ಅನುಭವಿಸುತ್ತಾನೆ.

ಮುಂದಕ್ಕೆ ಕುಭೋಗ ಭೂಮಿಯಲ್ಲಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾತ್ ।
ಕುಭೋಗ ಭೂಮ್ಯಾಂಚ ಭವೇತ್ಕುಜನ್ಮ ॥

ಅರ್ಥ :- ಹೇ ದಯಾನಿಧೇ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಕುಭೋಗ ಭೂಮಿಯಲ್ಲಿ ಜನಿಸುವನೆಂಬುದನ್ನು ದಯವಿಟ್ಟು ವರ್ಣಿಸಬೇಕು.



ಉತ್ತರ :- ಮಿಥ್ಯಾತ್ವಭಾಜೇ ಮುನಯೇಽನ್ನದಾನಂ ।
ಯೇನ ಪ್ರದತ್ತಂ ಚ ಜಲೌಷಧಾದಿ ॥
ಸದೃಷ್ಟಿ ಸಾಧೋಶ್ಚ ಕೃತೋಽಪಮಾನ ।
ಉತ್ಪದ್ಯತೇ ಸಾ ಸ ಕುಭೋಗ ಭೂಮ್ಯಾಂ ॥ ೪೪ ॥

ಅರ್ಥ :- ಯಾರು ಮಿಥ್ಯಾದೃಷ್ಟಿ ಸಾಧುಗಳಿಗೆ ಆಹಾರದಾನ, ಔಷಧಾದಿ ದಾನಗಳನ್ನು ಮಾಡುವುದು ಮತ್ತು ಸಮ್ಯಗ್ದೃಷ್ಟಿ ಸಾಧುವರ್ಗವನ್ನು ಅಪಮಾನ, ನಿಂದೆ ಮಾಡುವ ಮನೋಭಾವನೆಯುಳ್ಳವನು ಮರಣವನ್ನು ಹೊಂದಿ ಕುಭೋಗ ಭೂಮಿಯಲ್ಲಿಯೇ ಜನಿಸುವನು.

ಭಾವಾರ್ಥ :- ಯಾವ ಭೂಮಿಯಲ್ಲಿ ಯಾವ ವಿಧದ ಬೀಜವನ್ನು ಬಿತ್ತುತ್ತೇವೆಯೋ ಅದೇ ವಿಧದ ಫಲವು ಸಿಗುವುದು. ಉತ್ತಮ ಭೂಮಿಯಲ್ಲಿ ಬಿತ್ತಲ್ಪಟ್ಟಿರುವ ಬೀಜವು ಉತ್ತಮ ಫಲವನ್ನೇ ಕೊಡುವುದು. ಅದೇ ಬೀಜವನ್ನು ಕೆಟ್ಟಭೂಮಿಯಲ್ಲಿ ಬಿತ್ತಿದರೆ ಅದೇ ಗುಣದ ಫಲವು ದೊರೆಯುವುದು. ಅದೇ ಬೀಜವನ್ನು ಊಸರ ಭೂಮಿಯಲ್ಲಿ ಬಿತ್ತಿದರೆ ಬೀಜವೂ ಕೂಡಾ ಸಿಕ್ಕುವುದಿಲ್ಲವು. ಅದರಂತೆ ಯಾವನು ಸಮ್ಯಗ್ದೃಷ್ಟೀ ವೀತರಾಗ ನಿರ್ಗ್ರಂಥ ಸಾಧುಗಳಿಗೆ ಆಹಾರ, ಔಷಧ, ಶಾಸ್ತ್ರಾದಿ ಮೊದಲಾದವುಗಳನ್ನು ದಾನ ಮಾಡುತ್ತಾನೆಯೋ ಅವನಿಗೆ ಆ ದಾನದ ಫಲವಾಗಿ ಉತ್ತಮ ಭೋಗ ಭೂಮಿಯೂ, ಸಮ್ಯಗ್ದೃಷ್ಟಿ ಶ್ರಾವಕರಿಗೆ ದಾನವೀಯುವುದರಿಂದ ಮಧ್ಯಮ ಭೋಗ-ಭೂಮಿಯು ಪ್ರಾಪ್ತವಾಗುವುದು. ಇದರ ಮುಖ್ಯಾಭಿಪ್ರಾಯವು, ಸಮ್ಯಗ್ದೃಷ್ಟಿ ವೀತರಾಗ ನಿರ್ಗ್ರಂಥ ಸಾಧುವರ್ಯರು ಉತ್ತಮ ಪಾತ್ರರೆಂದೂ, ಸಮ್ಯಗ್ದೃಷ್ಟೀ ವ್ರತಿಕ ಶ್ರಾವಕನು ಮಧ್ಯಮ ಪಾತ್ರನೆಂದೂ, ಮತ್ತೆ ಸಮ್ಯಗ್ದೃಷ್ಟೀ ಅವಿರತಿ ಶ್ರಾವಕನು ಜಘನ್ಯ ಪಾತ್ರನೆಂದು ತಿಳಿಯಬೇಕು. ಮಿಥ್ಯಾದೃಷ್ಟಿ ವ್ರತೀ ಸಾಧುಗಳು ಕುಪಾತ್ರವೆಂದು ಹೇಳಿಸಿಕೊಳ್ಳುವರು. ಅವರಿಗೆ ದಾನ ಕೊಡುವುದರಿಂದ ಕುಭೋಗಭೂಮಿಯು ಪ್ರಾಪ್ತಿಯಾಗುವುದು. ಮಿಥ್ಯಾದೃಷ್ಟೀ ಅವ್ರತೀ ಸಾಧುಗಳು ಅಪಾತ್ರರು. ಅವರಿಗೆ ದಾನ ಮಾಡುವುದರಿಂದಲೂ ಯಾವ ವಿಧದ ಫಲವು ದೊರೆಯಲಾರದು. ವ್ಯರ್ಥವೆಂದೇ ತಿಳಿಯಬೇಕು. ಸಮ್ಯಗ್ದೃಷ್ಟೀ ನಿರ್ಗ್ರಂಥ ವೀತರಾಗ ಗುರುವರ್ಯರನ್ನು ನಿಂದಿಸುವವನು ಮಿಥ್ಯಾದೃಷ್ಟಿಯೇ,

ಅಂತಹವನು ಕುಭೋಗಭೂಮಿಯಲ್ಲಿ ಮನುಷ್ಯ ಪರ್ಯಾಯವನ್ನು ಪಡೆದಿದ್ದರೂ ಕೂಡಾ ತಿರ್ಯಂಚಗಳಂತಿರುತ್ತಾರೆ. ಈ ಎಲ್ಲ ವಿಷಯವನ್ನು ವಿಚಾರಿಸಿ ಸಮ್ಯಗ್ದೃಷ್ಟೀ ವೀತರಾಗ ನಿರ್ಗ್ರಂಥ ಗುರುಗಳಿಗೆ ಭಕ್ತಿಭಾವದಿಂದ ದಾನವನ್ನೀಯುತ್ತಿರಬೇಕು. ಸಮ್ಯಗ್ದೃಷ್ಟೀ ಶ್ರಾವಕರನ್ನು ಕೂಡಾ ಮರೆಯಬಾರದು. ಅರ್ಥಾತ್ ಅವರಿಗೂ ದಾನ, ಸತ್ಕಾರವನ್ನು ಮಾಡುತ್ತಿರಬೇಕೆಂದು ಭಾವವು. ಇನ್ನಿತರರಿಗೆ ಕೊಡಬೇಕೆಂದಿದ್ದರೆ ಕರುಣಾಪೂರ್ವಕ, ಹೊಟ್ಟೆ ಹಸಿದವರಿಗೂ, ಬಾಯಾರಿಕೆಯಿಂದ ಬಳಲಿದವರಿಗೂ, ಆಹಾರಪದಾರ್ಥಗಳನ್ನೀಯಬೇಕು. ಇದಕ್ಕೇನೇ ಕರುಣಾದಾನವೆಂದು ಹೇಳುತ್ತಾರೆ.

ಇನ್ನು ಮುಂದಕ್ಕೆ ಕುಗ್ರಾಮವಾಸಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾತ್ ।
ಕುಗ್ರಾಮವಾಸೀ ಭವತೀಹ ಜೀವಃ ॥

ಅರ್ಥ :- ಹೇ ಪರಮ ಗುರುವೇ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಕುಗ್ರಾಮದಲ್ಲಿ ವಾಸಿಸುವನು ಎಂಬುದನ್ನು ವಿವರಿಸಬೇಕು.

ಉತ್ತರ :- ಆರೋಪ್ಯ ದೋಷಂ ಹಿ ಹಠಾದಸತ್ಯಂ ।
ನಿಷ್ಕಾಸಿತಾ ಯೇನ ಜನಾ ವನಾದೌ ॥
ಕುಕ್ಷೇತ್ರ ಜಂತೋಶ್ಚ ಕೃತಾ ಪ್ರಶಂಸಾ ।
ಕುಗ್ರಾಮವಾಸೀ ಸ ಭವೇತ್ಕುಭಾವಾತ್ ॥ ೪೫ ॥

ಅರ್ಥ :- ಯಾವನು ಪರರ ಮೇಲೆ ಅಸತ್ಯದೋಷಾರೋಪಣೆಮಾಡಿ ಬಲಾತ್ಕಾರದಿಂದ ಆತನನ್ನು ಗ್ರಾಮದಿಂದ ಹೊಡೆದು, ಬಡಿದು ವನಕ್ಕಟ್ಟುವನೋ ಅಥವಾ ಕುಕ್ಷೇತ್ರದಲ್ಲಿರುವವರನ್ನು ಪ್ರಶಂಸಿಸುವನೋ ಆ ಪುರುಷನು ಸತ್ತು ತನ್ನ ಪೂರ್ವ ದುಷ್ಪರಿಣಾಮದ ಫಲವಾಗಿ ಕುಗ್ರಾಮದಲ್ಲಿಯೇ ಜನ್ಮತಾಳುವನು.

ಭಾವಾರ್ಥ :- ಅನ್ಯರನ್ನು ಅವರ ಮನೆಯಿಂದ ಹೊಡೆದೋಡಿಸುವುದು, ದುಃಖವನ್ನುಂಟುಮಾಡುವುದು ಇವೆಲ್ಲವೂ ಮಹಾ ಪಾಪಕಾರ್ಯಗಳಾಗಿವೆ.



ಅದು ಹಿಂಸಾಪಾಪದಲ್ಲಿ ಅಂತರ್ಭೂತವಾಗಿರುತ್ತದೆ. ಯಾಕೆಂದರೆ ಮನೆಯಿಂದ ಹೊಡೆದೋಡಿಸಲ್ಪಟ್ಟವನಿಗೆ ಯಾವ ವಿಧದ ಆಧಾರಗಳಿಲ್ಲದೆ ಮಹಾ ದುಃಖಿತನಾಗುತ್ತಾನೆ. ಇಂತವನು ಕುಗ್ರಾಮದಲ್ಲಿ ಜನಿಸಿ ಪಡಬಾರದ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುತ್ತಾನೆ. ಹೀಗೆ ತನ್ನ ಮಹಾ ಪಾಪಮಯ ದುಷ್ಪರಿಣಾಮಗಳ ಮೂಲಕ ಮ್ಲೇಚ್ಛಾದಿ ಭೂಮಿಗಳಲ್ಲಿ ಜನಿಸಿದವರನ್ನು ಬಾಯಿತುಂಬಾ ಹೊಗಳಿರುವುದರ ಫಲವಾಗಿ ಕುಗ್ರಾಮವಾಸಿಯೆ ಆಗಬೇಕು. ಆದ್ದರಿಂದ ಯಾರೂ ಯಾರನ್ನೂ ಮನೆಯಿಂದ ಹೊಡೆದೋಡಿಸುವುದಾಗಲೀ, ತೊಂದರೆ ಕೊಡುವುದಾಗಲೀ ಮಾಡಬಾರದು. ಇದರಂತೆ ಪಶು-ಪಕ್ಷಿಗಳ ಗೂಡನ್ನು ಹಾಳುಮಾಡುವುದಾಗಲೀ ಮಾಡಬಾರದು. ಯಾಕೆಂದರೆ ನಿರಪರಾಧೀ ಪಶು-ಪಕ್ಷಿಗಳ ಗೂಡನ್ನು ನಾಶಮಾಡುವುದರಿಂದ ಅವುಗಳಿಗೆ ಘೋರ ದುಃಖವು ಉಂಟಾಗುತ್ತದೆ. ಮಾತ್ರವಲ್ಲ; ಗೂಡುಗಳಿಲ್ಲದೆ ಅವು ಮರಣದ ಬಲೆಗೆ ಸಿಲುಕುವ ಸಂಭವವುಂಟು. ಇಂತಹ ಅಧರ್ಮ ಕಾರ್ಯಗಳಿಂದ ದೂರವಿರುವುದೇ ಸುಖದ ಮಾರ್ಗವಾಗಿರುತ್ತದೆ.

ಮುಂದಕ್ಕೆ ವ್ಯವಹಾರಶೂನ್ಯನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಸ್ಯಾದೇವ ಜಿ ವೋ ವ್ಯವಹಾರಶೂನ್ಯಃ ॥

ಅರ್ಥ :- ಹೇ ಭಗವಾನ್ ! ಈ ಜೀವನು ಯಾವ ಪಾಪಕರ್ಮದ ಉದಯದಿಂದಲೇ ವ್ಯವಹಾರಶೂನ್ಯನಾಗಿಯೇ ಜನಿಸುವನು ಎಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ದೃಷ್ಟ್ವಾಪ್ಯ ಕುಪ್ಯದ್ ವ್ಯವಹಾರ ದಕ್ಷಾನ್ ।
ವೃಥಾಭಿಮಾನಂ ಚ ವಿಧಾಯ ತುಷ್ಯೇತ್ ॥
ವಾ ಧೀಮಾತೋ ऽಜ್ಞಾನತಃ ಏವ ನಿಂದಾಂ ।
ಸ್ಯಾತ್ತೀವ್ರ ಪಾಪಾದ್ ವ್ಯವಹಾರಶೂನ್ಯಃ ॥ ೪೬ ॥

ಅರ್ಥ :- ವ್ಯವಹಾರ ಚತುರನಾದವನನ್ನು ನೋಡಿ ವ್ಯರ್ಥವಾಗಿ ಕೋಪಗೊಳ್ಳುವವನು, ನಿಃಷ್ಪ್ರಯೋಜನವಾಗಿ, ಗರ್ವಿಷ್ಠನಾಗಿ ಸಂತೋಷ

ಪಡುವನೋ ಅಥವಾ ತನ್ನ ಅಜ್ಞಾನದಿಂದ ಅನ್ಯ ಬುದ್ಧಿಶಾಲಿಗಳನ್ನು ನಿಂದಿಸಿ ಕೊಂಡಿರುತ್ತಾನೆಯೋ ಆ ಮಾನವನು ತನ್ನ ಮರಣಾನಂತರ ಮರುಭವದಲ್ಲಿ ವ್ಯವಹಾರ ಶೂನ್ಯನಾದ ಮನುಷ್ಯನಾಗಿ ಜನಿಸುವನು.

ಭಾವಾರ್ಥ :- ಶಾಸ್ತ್ರಜ್ಞಾನ ಚತುರರು, ವ್ಯವಹಾರ ದಕ್ಷರು ಹೀಗೆ ಅನೇಕ ವಿಷಯಗಳಲ್ಲಿ ವಿದ್ವಾಂಸರಿರುತ್ತಾರೆ. ಕೆಲವರಲ್ಲಿ ಶಾಸ್ತ್ರಗ್ರಂಥಗಳ ಅಗಾಧ ಪಾಂಡಿತ್ಯವಿದ್ದು; ವ್ಯವಹಾರ ಜ್ಞಾನದಲ್ಲಿ ಶೂನ್ಯನಾಗಿರಬಹುದು. ಇನ್ನು ಕೆಲವರಲ್ಲಿ ಶಾಸ್ತ್ರಗ್ರಂಥಗಳ ಗಂಧವೂ ಇಲ್ಲದೆ ವ್ಯವಹಾರ ಜ್ಞಾನದಲ್ಲಿ ಮಹಾ ನಿಷ್ಣಾತನಾಗಿರಬಹುದು. ಇದಕ್ಕೆಲ್ಲ ಸರಳ ಬುದ್ಧಿಯ ಅವಶ್ಯಕತೆಯಿರುತ್ತದೆ. ಸರಳ ಬುದ್ಧಿಯುಳ್ಳವನಿಗೇನೇ ಶಾಸ್ತ್ರಜ್ಞಾನವು ಅತಿ ಶೀಘ್ರ ಹಸ್ತಗತವಾಗುತ್ತದೆ. ಆದರೆ ಸರಳ ಬುದ್ಧಿಯುಳ್ಳ, ಶಾಸ್ತ್ರಜ್ಞಾನಿಗಳು ವ್ಯವಹಾರ ಚತುರರಾಗುವುದಿಲ್ಲವು. ಆದರಲ್ಲಿ ಚತುರರಾಗಬೇಕಾದರೆ ತೀಕ್ಷ್ಣ ಬುದ್ಧಿಯಿರಬೇಕಾಗುವುದು. ಆದರೂ ಕುಟಿಲಬುದ್ಧಿಯುಳ್ಳವನಾಗುವುದು ಮಾತ್ರ ಮಹಾ ನಿಂದ್ಯವಾಗಿರುತ್ತದೆ. ಹಾಗಿದ್ದರೂ ಒಂದೊಂದು ಸರ್ತಿ ವ್ಯವಹಾರ ಕಾರ್ಯದಲ್ಲಿ ಕುಟಿಲತೆಯು ಬಂದೇಬರುವುದು. ಅಂತಹ ವ್ಯವಹಾರ ಕುಶಲರಾದವರನ್ನು ಕಂಡು ದುರಭಿಮಾನದಿಂದ ನಿಂದಿಸುವುದು, ಅಪಮಾನಗೊಳಿಸುವುದು, ಕ್ರೋಧಗೊಳ್ಳುವುದರ ಫಲವಾಗಿಯೇ ವ್ಯವಹಾರ ಶೂನ್ಯನಾದ ಮಾನವನಾಗಿ ಜನಿಸುವನು.

ಇನ್ನು ಮುಂದಕ್ಕೆ ಹೊಟ್ಟೆಬಾಕ (ಅಧಿಕ ಭೋಜೀ)ನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- **ಕರ್ಮೋದಯಾನ್ಮೇ ವದ ದೇವ ! ಕಸ್ಮಾದ್ ।**
**ಬಹ್ವನ್ನಭುಕ್ತೇ ಽಪಿ ಭವೇನ್ನತೃಪ್ತಃ ॥**

ಅರ್ಥ :- ಹೇ ಪರಮಾತ್ಮನ್ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಅಧಿಕ ಅನ್ನವನ್ನು ಭುಂಜಿಸುವವನಾಗುವನೆಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸಬೇಕು.



ಉತ್ತರ :- **ದತ್ತಾನ್ನದಾನಂ ಪಶುಪಕ್ಷಿಕೇಭ್ಯೋ ।**
**ಬಲಾತ್ಸ್ವಯಂ ಸೇವಿತವಾನ್ ನರೋಯಃ ॥**
**ಯೋಭೋಜನಾದೌ ಚ ರತೋ ನ ದಾನೇ ।**
**ಮೂರ್ಖಃ ಸ ಮೃತ್ವಾ ವಿಪುಲಾನ್ನಭೋಜೀ** ॥ ೪೭ ॥

ಅರ್ಥ :- ಯಾವ ಪುರುಷನು ಪಶುಗಳಿಗೆ ಕೊಡಲ್ಪಟ್ಟಿರುವ ಆಹಾರ ಪದಾರ್ಥವನ್ನು ಬಲತ್ಕಾರಪೂರ್ವಕ ಸ್ವಯಂ ಸೇವಿಸುವನೋ ಅಥವಾ ಸದಾಕಾಲವೂ ತಿನ್ನುವ, ಉಣ್ಣುವ, ಕುಡಿಯುವ ಕಾರ್ಯಗಳಲ್ಲಿ ಮಗ್ನನಾಗಿರುತ್ತಾನೋ ಮತ್ತು ದಾನವನ್ನೀಯಲು ಮನಸ್ಸುಬರುವುದಿಲ್ಲವೋ ಅಂತಹ ಮೂರ್ಖ ಮಾನವನು ಸತ್ತು ಮರು ಭವದಲ್ಲಿ ಹೆಚ್ಚು ಅನ್ನವನ್ನು ಭುಂಜಿಸುವವನಾಗಿಯೇ ಜನಿಸುವನು.

ಭಾವಾರ್ಥ :- ಯಾವ ಮನುಷ್ಯನು ತನ್ನಿಂದ ಕೊಟ್ಟಿರುವ ದಾನ ವಸ್ತುವನ್ನು ಅಥವಾ ತನ್ನ ಪೂರ್ವಜರು ಕೊಟ್ಟಿದ್ದ ದಾನವಸ್ತುವನ್ನು ಅಥವಾ ಪರರಿಂದ ಕೊಡಲ್ಪಟ್ಟಿದ್ದ ದಾನವಸ್ತುಗಳನ್ನು ಸ್ವಯಂ ತೆಗೆದುಕೊಳ್ಳುವ ಪುರುಷನು ಪಾಪಿಗಳಲ್ಲಿ ಮಹಾಪಾಪಿಯೆಂದು ತಿಳಿಯಬೇಕು. ಇನ್ನು ಕೆಲವರು ಜಿನಮಂದಿರ, ಜಿನಪ್ರತಿಮೆ, ಮತ್ತು ಸ್ವಾಧ್ಯಾಯ ಶಾಲೆಗಳಿಗೂ ದಾನ ಮಾಡುತ್ತಾರೆ. ಹಾಗೆ ಭಿಕ್ಷುಕ ಸಮೂಹಕ್ಕೂ ದಾನಗೈಯುತ್ತಾರೆ. ಅಂಥವರು ನಿಜವಾಗಿಯೂ ಮಹಾ ಪುಣ್ಯಶಾಲಿಗಳು. ಪರಲೋಕಕ್ಕೂ ಪುಣ್ಯನಿಧಿಯನ್ನೇ ತೆಗೆದುಕೊಂಡು ಹೋಗುತ್ತಾರೆ. ಮತ್ತೆ ಕೆಲವರು ಜಿನಾಲಯ, ಜಿನಪ್ರತಿಮೆ ಅನ್ಯ ಧಾರ್ಮಿಕ ಕಾರ್ಯಗಳಿಗಾಗಿಯೂ ಉಪಯೋಗಿಸುವ ಧನಸಂಪತ್ತಿಯನ್ನು ಬಲತ್ಕಾರಪೂರ್ವಕ ಸ್ವಯಂ ಉಪಭೋಗಿಸುವನೋ ಅಥವಾ ಅಂಗೋಪಾಂಗಗಳಿಲ್ಲದ, ಕಣ್ಣಿಲ್ಲದ ಪಶು-ಪಕ್ಷಿಗಳಿಗೂ, ಇಡಲ್ಪಟ್ಟಿರುವ ಆಹಾರ ಧಾನ್ಯಗಳನ್ನು ತಾನೇ ತೆಗೆದುಕೊಂಡು ಭಕ್ಷಿಸುವ ಮಾನವನು ಮಹಾ ಪಾಪಿಯೆಂದೇ ನಿಶ್ಚಯಿಸಿಕೊಳ್ಳಬೇಕು. ಧರ್ಮಶಾಸ್ತ್ರಗಳಲ್ಲಿ ಆಜ್ಞೆಯಿತ್ತಿರುವುದೇನೆಂದರೆ ಸ್ವಯಂ ಸಂಪಾದಿಸಿದ ಧನದ ಅಲ್ಪ ಭಾಗವನ್ನು ಧಾರ್ಮಿಕ ಕಾರ್ಯಗಳಿಗೋಸ್ಕರ ತ್ಯಾಗಮಾಡಬೇಕು. ಮತ್ತೆ ಜಿನಪೂಜೆ, ಪಾತ್ರದಾನ ಮೊದಲಾದ ಉತ್ತಮ ಕಾರ್ಯಗಳಿಗಾಗಿ ದಾನಮಾಡುತ್ತಿರಬೇಕು. ಆದರೆ

ತಾನು ಉತ್ತಮರೀತಿಯಿಂದ ಸಂಪಾದಿಸುತ್ತಿದ್ದರೂ ಕೂಡಾ ದೇವಸ್ಥಾನ ಮೊದಲಾದವುಗಳಿಗೆ ಇತ್ತ ದ್ರವ್ಯವನ್ನು ತೆಗೆದುಕೊಳ್ಳುವುದು, ಪಶು-ಪಕ್ಷಿಗಳಿಗಾಗಿ ಕೊಡಲ್ಪಟ್ಟಿರುವ ಆಹಾರವನ್ನೇ ತಾನು ಉಪಯೋಗಿಸುವುದು ಇವೇ ಮೊದಲಾದ ದುಷ್ಕೃತ್ಯಗಳ ಫಲವಾಗಿ ಮಾನವನು ತನ್ನ ಮರಣಾನಂತರ ಪರ ಜನ್ಮದಲ್ಲಿ ಭಸ್ಮಕ ವ್ಯಾಧಿಗೆ ಗುರಿಯಾಗುವನು. ಈ ವ್ಯಾಧಿಯ ಫಲವೇ ಎಷ್ಟುತಿಂದರೂ ಸಾಲುವುದಿಲ್ಲವು. ಆದ್ದರಿಂದ ಯಾರೂ ದಾನವಿತ್ತ ದ್ರವ್ಯವನ್ನು ಉಪಯೋಗಿಸದಿರುವುದೇ ಸಕಲ ಸುಖದ ಪ್ರಾಪ್ತಿಯ ಸರಳ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ನಿರ್ಧನತೆಗೆ ಅನ್ಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾದ್ ।
ಧನೇನ ಹೀನೋ ಭವತೀಹ ಜೀವಃ ॥

ಅರ್ಥ :- ಹೇ ಪ್ರಭೋ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಧನಹೀನ, ದರಿದ್ರನಾಗುವನೆಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಉತ್ತರ :- ಧನಂ ಪರೇಷಾ ಮಪಹೃತ್ಯ ತುಷ್ಯೇದ್ ।
ದೃಷ್ಟ್ವಾ ಹರಾಂತಂ ಗ್ರಹರತ್ನರಾಜ್ಯಮ್ ॥
ಕೃತ್ವಾಪಮಾನಂ ಧನಹೀನ ಜಂತೋಃ ।
ನ ದ್ರವ್ಯಹೀನೋ ಭವತಿ ಹ್ಯಭಾಗ್ಯಃ ॥ ೪೮ ॥

ಅರ್ಥ :- ಯಾರು ಪರರ ಧನವನ್ನು ಅಪಹರಿಸಿ ಸಂತುಷ್ಟನಾಗುತ್ತಾನೆಯೋ, ಪರರ ಮನೆ, ಧನ, ರತ್ನ, ಆಭರಣಾದಿಗಳನ್ನು ಅಪಹರಿಸುವುದನ್ನು ತಿಳಿದು, ಕಂಡು ಆನಂದ ಮನಸ್ಕನಾಗುವನೋ ಅಥವಾ ಧನಹೀನರನ್ನು ಧಿಕ್ಕರಿಸಿ, ಅಪಮಾನಿಸಿ ಸಂತೋಷ ಪಡುವ ಮಾನವನು ಸತ್ತು ನಿರ್ಭಾಗ್ಯನಾದ ಮಹಾ ದರಿದ್ರನಾಗಿಯೇ ಜನಿಸುವನು.

ಭಾವಾರ್ಥ :- ಪರರ ಧನವನ್ನು ಅಪಹರಿಸುವುದು, ಅಪಹರಿಸುವವ



ರನ್ನು ಕಂಡು ಸಂತೋಷಪಡುವುದು ದೊಡ್ಡ ಕಳ್ಳತನವಾಗಿರುತ್ತದೆ. ಹಾಗೆ ಪರರ ಧನವನ್ನು ಕಿತ್ತುಕೊಂಡು ಅವರನ್ನು ದರಿದ್ರನನ್ನಾಗಿ ಮಾಡುವುದು, ಅಂತಹ ದುಃಖೀ ನಿರ್ಧನರ ಅಪಮಾನಗೊಳಿಸುವ ಮಾನವನು ನಿರ್ಭಾಗ್ಯ ದರಿದ್ರನಾಗುತ್ತಾನೆ. ಕಾರಣ ಧನವು ಜೀವಗಳ ಬಾಹ್ಯ ಪ್ರಾಣವಾಗಿರುತ್ತದೆ. ಅಂತಹ ಧನವನ್ನು ರಕ್ಷಣೆಮಾಡುತ್ತಾ, ತನ್ನ ಪ್ರಾಣವಿರುವವರೆಗೂ ಯಾರೂ ಅಪಹರಿಸಲು ಸಾಧ್ಯವಾಗುವುದಿಲ್ಲವು. ಅದನ್ನು ಅಪಹರಿಸಬೇಕಾದರೆ ನನ್ನನ್ನು ಕೊಂದೇ ತೆಗೆದುಕೊಂಡು ಹೋಗಲಿ ಎಂದು ಹೇಳುವುದರಿಂದ ಧನವು ಪ್ರಾಣಗಳಿಗಿಂತ ಅಧಿಕ ಪ್ರಿಯವಾದುದೆಂದು ಸಿದ್ಧವಾಗುತ್ತದೆ. ಅಂತಹ ಧನವನ್ನು ಅಪಹರಿಸಿದರೆ ಪ್ರಾಣವನ್ನೇ ಅಪಹರಿಸಿದಂತಾಗುತ್ತದೆ. ಆದ್ದರಿಂದ ಪರರ ಧನವನ್ನು ಅಪಹರಿಸುವುದು ಮಹಾ ಪಾಪವೆಂದೆನ್ನಿಸಿಕೊಳ್ಳುವುದು. ಇದರಲ್ಲಿ ಹಿಂಸೆ ಮತ್ತು ಕಳ್ಳತನಗಳೆರಡರ ಪಾಪವು ಸಂಭವಿಸುವುದು. ಇಂತಹ ಅನಿಷ್ಟ ಕಾರ್ಯಗಳನ್ನು ಮಾಡುವ ಮಾನವನು ಪರಲೋಕದಲ್ಲಿ ಜನ್ಮತಾಳಿ ನಿಶ್ಚಯವಾಗಿ ನಿರ್ಧನ ಮತ್ತು ಮಹಾ ದುಃಖಿಯಾಗುತ್ತಾನೆ. ಆದ್ದರಿಂದ ಯಾರೂ ಪರರ ಧನಸಂಪತ್ತಿಯನ್ನು ಅಪಹರಿಸಬಾರದು, ಕಿತ್ತುಕೊಳ್ಳಬಾರದು.

ಮುಂದಕ್ಕೆ ಕುತ್ಸಿತ ಕಾವ್ಯವನ್ನು ರಚಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ದಕ್ಷಃ ಕುಕಾವ್ಯೇ ಭವತೀಹ ಜೀವಃ ॥

ಅರ್ಥ :- ಹೇ ಪ್ರಭೋ! ಯಾವ ಕರ್ಮದ ಉದಯದಿಂದ ಈ ಜೀವನು ಕುತ್ಸಿತ ಕಾವ್ಯಗಳನ್ನು ರಚಿಸುವುದರಲ್ಲಿ ನಿಪುಣನಾಗಲು ಕಾರಣವೇನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಕುಕಾವ್ಯಶಾಸ್ತ್ರೇ ऽಪ್ಯಕರೋದ್ ರುಚಿಂ ಯಃ ।
ಶ್ರುತ್ವಾ ತಥಾ ದಂತಕಥಾ ಮಸಾರಾಮ್ ॥
ಕುಶಾಸ್ತ್ರದಾನಂ ಪ್ರವಿಧಾಯ ತುಷ್ಯೇತ್ ।
ಕುಕಾವ್ಯಶಾಸ್ತ್ರಂ ನಿಪುಣೋ ಭವೇತ್ಸಃ ॥ ೪೯ ॥

ಅರ್ಥ :- ಯಾವ ಪುರುಷನು ಕುತ್ಸಿತ ಶಾಸ್ತ್ರಗಳನ್ನು ಓದುವುದರಲ್ಲಿ

ಅಭಿರುಚಿ ಉಳ್ಳವನಾಗಿರುವನೋ, ಸಾರ ಅರ್ಥರಹಿತ ದಂತಕಥೆಗಳನ್ನು ಕೇಳಿ ಪ್ರಸನ್ನ ಚಿತ್ತನಾಗುತ್ತಾನೆಯೋ, ಕುತ್ಸಿತಶಾಸ್ತ್ರ (ಕಾವ್ಯ)ಗಳನ್ನು ವಿತರಣೆ ಮಾಡಿ ಆನಂದಭರಿತನಾಗುತ್ತಾನೆಯೋ, ಅಂತಹ ಮಾನವನು ಮರಣವನ್ನು ಹೊಂದಿ ಕುತ್ಸಿತಶಾಸ್ತ್ರಗಳ ರಚನಾ ಕಾರ್ಯಗಳಲ್ಲಿ ನಿಪುಣನಾಗಿಯೇ ಜನಿಸುವನು.

ಭಾವಾರ್ಥ :- ಕಾಮಶಾಸ್ತ್ರ ಕಥೆಗಳನ್ನು ಹೇಳುವ, ಕಾಮವಿಕಾರವನ್ನು ಉದ್ದೀಪಿಸುವ ಕಾವ್ಯಗಳಿಗೆ ಕುತ್ಸಿತ ಕಾವ್ಯಗಳೆಂದು ಹೇಳುತ್ತಾರೆ. ಅಂತಹ ಕಾವ್ಯಗಳ ರಚನೆಯಿಂದ ಮಹಾ ಪಾಪಕರ್ಮಗಳೇ ಸಂಭವಿಸುವುದು. ಅವನ್ನು ಓದುವುದರಿಂದಲೂ, ಕೇಳುವುದರಿಂದಲೂ ಪಾಪವನ್ನೇ ಸಂಪಾದಿಸಿ ಕೊಳ್ಳುತ್ತಾರೆ. ಮತ್ತೆ ಕೆಲವು ನಿಃಸಾರ ಕಾವ್ಯಗಳಿವೆ, ಅವನ್ನು ಓದುವುದುರಿಂದ ಕಾಮವಿಕಾರವೂ, ಕ್ರೋಧವೂ ಮತ್ತು ಮಾಯಾಚಾರಾದಿ ದುಃಸಂಸ್ಕಾರಗಳೇ ಬೆಳೆಯುತ್ತವೆ. ಹಾಗೆ ಕೆಲವು ದಂತಕಥೆಗಳನ್ನು ಓದುವುದರಿಂದ ಪರಿಣಾಮ ಗಳಲ್ಲಿ ಮಲೀನತೆಯುಂಟಾಗುವುದು ಕೂಡಾ ಕಂಡುಬರುತ್ತದೆ. ಈ ಪ್ರಕಾರ ಇಂತಹ ಕುತ್ಸಿತ ಪುಸ್ತಕಗಳ ದಾನವು ಪಾಪದಾಯಕವಾಗಿರುತ್ತದೆ. ಅವನ್ನು ಓದುವುದರಿಂದಲೂ, ಕೇಳುವುದರಿಂದಲೂ, ಸಂಭವಿಸುವ ಮಹಾ ಪಾಪ ಕರ್ಮಗಳ ಫಲವಾಗಿ ಪರಲೋಕದಲ್ಲಿ ಜನಿಸಿ ಘೋರ ದುಃಖವನ್ನುಂಟು ಮಾಡುವ ಕುಕಾವ್ಯಗಳನ್ನು ರಚಿಸುವುದರಲ್ಲಿ ಮಹಾ ಚತುರನಾಗಿ ನರಕಾದಿ ದುರ್ಗತಿ ಸಂಬಂಧವಾದ ದುಃಖವನ್ನನುಭವಿಸುತ್ತಾನೆ. ಆದ್ದರಿಂದ ಭವ್ಯಾತ್ಮರು ಎಂದೆಂದಿಗೂ ಕುಕಾವ್ಯಗಳನ್ನು ರಚಿಸಬಾರದು, ಕೇಳಬಾರದು ಇದೇ ಆತ್ಮ ಸುಖಶಾಂತಿಯ ಸುಗಮಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಜೀವನು ಅಧಿಕ ಭಾರವನ್ನು ಹೊರುವವನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಭವೇದ್ಧಿ ಜೀವೋ ಬಹುಭಾರವಾಹೀ ॥

ಅರ್ಥ :- ಹೇ ದೇವ ! ಈ ಜೀವನು ಯಾವ ಯಾವ ಪಾಪಕರ್ಮದ ಉದಯದಿಂದ ಹೆಚ್ಚು ಭಾರವನ್ನು ಹೊರುವವನಾಗಿ ಜನಿಸಲು ಕಾರಣ ವೇನೆಂಬುದನ್ನು ದಯವಿಟ್ಟು ಹೇಳಬೇಕು.



ಉತ್ತರ :- ಆರೋಪಣಾದ್ವಾಧಿಕ ಭಾರವಸ್ತು ।
ಛಲೇನ ಹೀನಾಧಿಕ ವಾಹನಾದ್ವಾ ॥
ದೀನಾನ್ ಪಶೂನ್ ವಾऽಧಿಕತಾಡನಾದ್ವಾ ।
ತುಷ್ಯೇತ್ ಸ ನಾ ಸ್ಯಾದ್ಬಹು ಭಾರವಾಹೀ ॥ ೫೦ ॥

ಅರ್ಥ :- ಮೂಕ, ದೀನ ಪಶುಗಳ ಮೇಲೆ ಅಧಿಕ ಭಾರವನ್ನು ಹೊರಿಸಿ ಆನಂದ ಪಡುವವನು, ಕುತಂತ್ರತೆಯಿಂದ ತನ್ನ ಶಕ್ತಿಸಾಮರ್ಥ್ಯದಿಂದಾಗಲೀ, ಪಶುಗಳಿಂದ, ಮನುಷ್ಯರಿಂದ ಅವುಗಳ ಶಕ್ತಿಮೀರಿ ಅಧಿಕ ಕೆಲಸಮಾಡಿಸಿ ಸಂತೋಷಭರಿತನಾಗುವವನು, ಹೊಡೆದು-ಬಡಿದು ಅಭಿಮಾನಪಡುವ ಮಾನವನು ತನ್ನ ಮರಣಾನಂತರ ಪರಲೋಕದಲ್ಲಿ ಜನ್ಮತಾಳಿ ಅಧಿಕ ಭಾರವನ್ನು ಹೊತ್ತು ದುಃಖಪಡುವವನಾಗಿಯೇ ಜನಿಸುವನು.

ಭಾವಾರ್ಥ :- ಮೂಕ ಪ್ರಾಣಿಗಳಾದ ಪಶುಗಳಿಂದ ಹೆಚ್ಚಾಗಿ ಕೆಲಸ ಮಾಡಿಸುವುದು, ಅಧಿಕ ಭಾರ ಹೊರಿಸುವುದು, ಅನುಚಿತವಾಗಿ ತಾಡನೆ ಮಾಡುವುದು ಇವೇ ಮೊದಲಾದವು ಮಹಾ ಪಾಪಕಾರ್ಯಗಳಾಗಿವೆ. ಪಶುಗಳು ಬಾಯಿ ಬರದ ಪ್ರಾಣಿಗಳು. ಮಾತನಾಡಲು ಆಗುವುದಿಲ್ಲವು. ಅವುಗಳ ಮೇಲೆ ಅಧಿಕ ಭಾರವನ್ನು ಹೊರಿಸುವುದರಿಂದ ಪಾಪ, ತಮಗೆ ಭಾರವಾಗುವುದೆಂದು ಹೇಳಲು ಸಾಧ್ಯವಾಗದೆ ಒಳಗೊಳಗೆ ಕಷ್ಟವನ್ನು ಸಹಿಸಿಕೊಳ್ಳುತ್ತವೆ. ಅದರಂತೆ ದೀನ, ದಲಿತ, ದರಿದ್ರರಾದವರ ಮೇಲೆ ಭಾರ ವಸ್ತುಗಳನ್ನು ಹೊರಿಸುವುದರಿಂದಲೂ ಇದೇ ಗತಿಯು. ಇದು ಅನ್ಯಾಯ, ಅಧರ್ಮವಲ್ಲವೆ? ಇದೇ ಪ್ರಕಾರವಾಗಿ ಹೆಚ್ಚು ಕೆಲಸಮಾಡಿಸುವುದು, ಅಧಿಕ ಶಿಕ್ಷೆ ವಿಧಿಸುವುದು ಮಹಾ ಅನ್ಯಾಯವಾಗಿರುತ್ತದೆ. ಅಂಗಹೀನ, ರೋಗಿ ಮತ್ತು ಗಾಯವಾಗಿರುವ ಪಶುಗಳಿಂದ ಕೆಲಸಮಾಡಿಸಬಾರದು. ಒಂದು ವೇಳೆ ಮಾಡಿಸಿದರೆ ಮಹದನ್ಯಾಯ, ಮಹಾ ಅಧರ್ಮವಾಗಿರುವುದು. ಈ ಪಾಪಮಯ ಸ್ವಭಾವವಿರುವ ಮಾನವನು ಸತ್ತು ಅತ್ಯಂತ ದೀನನಾಗಿಯೂ, ದರಿದ್ರನಾದ ಮಾನವನಾಗಿಯೂ ಮಾತ್ರವಲ್ಲ ತಿರ್ಯಂಚನಾಗಿಯೂ ಜನಿಸಿ ಅಸಹ್ಯ ಯಾತನೆಗಳನ್ನು ಅನುಭವಿಸುವನು. ಆದ್ದರಿಂದ ಭವ್ಯ ಜೀವಗಳು ಪಾಪಭೀರುಗಳಾಗಿ ಇಂತಹ ನಿಂದ್ಯಕಾರ್ಯಗಳಿಂದ ವಿರಾಮ ಪಡೆಯುವುದೇ ಆತ್ಮಸುಖಶಾಂತಿಯ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ದೀರ್ಘಾಯುಷ್ಯ ಉಳ್ಳವನಾಗಿದ್ದರೂ ಕೂಡಾ ಮಹಾ ದುಃಖಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾದ್ -
ದೀರ್ಘಾಯುರೇವಂ ಭವತೀಹ ದುಃಖೀ ॥

ಅರ್ಥ :- ಹೇ ದಯಾನಿಧೇ ! ಈ ಜೀವನು ದೀರ್ಘಾಯುಷ್ಯವನ್ನು ಪಡೆದು ಘೋರ ದುಃಖಕ್ಕೆ ಭಾಗಿಯಾಗಲು ಕಾರಣವೇನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ದ್ರುಚ್ಛೇದನಂ ವಾ ಖನನಂಚ ಮಹ್ಯಾಃ ।
ನಿಷ್ಕಾರಣಂ ಯೇನ ಕೃತಂ ಕುಪಾಪಮ್ ॥
ಹಟಾತ್ ತ್ರಸಸ್ಥಾವರ ಜೀವಬಾಧಾ ।
ದೀರ್ಘಾಯುರೇವಾಪಿ ಭವೇದ್ಧಿ ದುಃಖೀ ॥ ೫೧ ॥

ಅರ್ಥ :- ವಿನಾಕಾರಣ ಮರಗಿಡಗಳನ್ನು ಕತ್ತರಿಸುವುದು, ಭೂಮಿಯನ್ನ ಗಿಯುವುದು, ಮತ್ತು ಹಟಾತ್ ತ್ರಸ ಸ್ಥಾವರ ಜೀವಗಳಿಗೆ ದುಃಖವನ್ನು ಉಂಟುಮಾಡುವುದು, ಇವೇ ಮೊದಲಾದ ಪಾಪಕಾರ್ಯಗಳನ್ನು ಮಾಡುವ ನಿಂದ್ಯಮಾನವನು ಮರಣಾನಂತರ ಮುಂದಿನ ಭವದಲ್ಲಿ ದೀರ್ಘಾಯುಷ್ಯವನ್ನು ಪಡೆದಿದ್ದರೂ ಕೂಡಾ ಅಸಹ್ಯ ದುಃಖಕ್ಕೆ ಗುರಿಯಾಗುತ್ತಾನೆ.

ಭಾವಾರ್ಥ :- ಸಂಸಾರದಲ್ಲಿ ದೀರ್ಘಾಯುಷ್ಯವನ್ನು ಪಡೆಯುವುದು ಉತ್ತಮವೆಂದು ಭಾವಿಸುತ್ತಾರೆ. ಆದರೆ ಶಾರೀರಿಕವಾಗಲೀ, ಮಾನಸಿಕವಾಗಲೀ, ದುಃಖವಾಗುವಾಗ, ದಾರಿದ್ರ್ಯವುಂಟಾಗುವಾಗ, ಅಧಿಕ ಆಯುಷ್ಯವುಳ್ಳವರಿಗೆ ಮಹಾ ಘೋರ ದುಃಖವುಂಟಾಗುತ್ತಿರುತ್ತದೆ. ದೀರ್ಘ ಆಯುಷ್ಯವಿರುವಾಗ ಇಂದ್ರಿಯಗಳ ಶಕ್ತಿಯು ಕುಂದಿಹೋಗುವುದು. ಶರೀರವು ನಿರ್ಬಲವಾಗಿ ಕುಳಿತುಕೊಳ್ಳುವಾಗಲು, ಮೇಲಕ್ಕೇಳುವಾಗ ಆಗಲಿ ಶಕ್ತಿಸ್ವಾಧೀನತೆಯೂ ಕೂಡಾ ಇರುವುದಿಲ್ಲವು. ಯಾವ ವಿಧವಾದ ಕೆಲಸಕಾರ್ಯಗಳನ್ನು ಮಾಡುವ ಶಕ್ತಿಯಿರುವುದಿಲ್ಲವು. ಹೀಗೆ ಎಲ್ಲ ವಿಧದಿಂದಲೂ ವ್ಯರ್ಥವೆಂದೇ



ಭಾಸವಾಗುತ್ತದೆ. ಇಂತಹ ಅವಸ್ಥೆಯಲ್ಲಿ ಒಂದು ವೇಳೆ ದಾರಿದ್ರ್ಯವೂ, ಪುತ್ರ, ಪೌತ್ರರ ಕಠೋರ ವಚನ ಪ್ರಹಾರವೂ, ಶರೀರದಲ್ಲಿ ನಾನಾ ರೋಗಗಳ ಉತ್ಪತ್ತಿಯೂ, ತಿನ್ನಲು, ಉಣ್ಣಲು ಆಹಾರ ಪದಾರ್ಥಗಳ ಅಭಾವವೂ, ಇವೇ ಮೊದಲಾದ ನಾನಾ ದುಃಖಗಳು ಸಂಭವಿಸುವಾಗ ಆಯುಷ್ಯವನ್ನು ಕಳೆಯುವುದು ಮಹಾಕಷ್ಟವಾಗುವುದು. ಆ ದೀರ್ಘಾಯುವಿನಿಂದ ಸ್ವಯಂ ದುಃಖಿಯಾಗುತ್ತಾನೆ. ನೋಡುವವರಿಗೂ ಬೇಜಾರಾಗಿ ತೋರುತ್ತದೆ. ಅಂತಹ ಮನುಷ್ಯನನ್ನು ಕಂಡವರು ಈತ ಬೇಗನೆ ಸಾಯುತ್ತಿದ್ದರೆ ಪಾಪ ಒಳ್ಳೆಯದಾಗುತ್ತಿತ್ತು ಎಂದು ಆಡಿಕೊಳ್ಳುತ್ತಾರೆ. ದುಃಖಿಯಾಗಿ ದೀರ್ಘಾಯುಷ್ಯವನ್ನು ಪಡೆಯುವುದು ಅಧಿಕ ಕಷ್ಟಕಾರ್ಪಣ್ಯಕ್ಕೆ ಕಾರಣವೆಂದು ಸಿದ್ಧವಾಗುತ್ತದೆ. ಆದ್ದರಿಂದ ವ್ಯರ್ಥವಾಗಿ ಮರ, ಗಿಡ, ಬಳ್ಳಿಗಳನ್ನು ಕತ್ತರಿಸುವುದು, ಭೂಮಿಯನ್ನು ಅಗಿಯುವುದು, ಬೆಂಕಿಯನ್ನುರಿಸುವುದು, ನೀರನ್ನು ಚೆಲ್ಲುವುದು ಮತ್ತು ತ್ರಸ ಸ್ಥಾವರ ಜೀವ-ಜೀವಗಳಿಗೆ ನಾನಾ ಬಗೆಯಾಗಿ ವೇದನೆಯನ್ನುಂಟು ಮಾಡುವ ಮಾನವನು ಸತ್ತು ದೀರ್ಘಾಯುಷ್ಯವನ್ನು ಪ್ರಾಪ್ತಮಾಡಿಕೊಂಡಿದ್ದರೂ ಕೂಡಾ ಮಹಾ ದುಃಖಕ್ಕೆ ಭಾಗಿಯಾಗುತ್ತಾನೆ.

ಇನ್ನು ಮುಂದಕ್ಕೆ ನಪುಂಸಕನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾದ್ ।
ನಪುಂಸಕ ಸ್ಯಾದ್ಭುವಿ ಸರ್ವನಿಂದ್ಯಃ ॥

ಅರ್ಥ :- ಹೇ ಪರಮ ಗುರುವೇ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಸರ್ವರಿಗೂ ನಿಂದ್ಯವಾದ ನಪುಂಸಕನಾಗಿ ಜನಿಸುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಕ್ರೀಡಾ ಹ್ಯನಂಗೆ ಚ ರುಚಿಃ ಕುಹಾಸ್ಯೆ ।
ಕ್ಲೀಬಸ್ಯ ನಿಂದಾ ಭುವಿ ತೀವ್ರಕಾಮೀ ॥
ಕುಶೀಲ ಹೇತೋಶ್ಚ ಕೃತಃ ಪ್ರಯತ್ನಃ ।
ಇತ್ಯಾದಿ ಪಾಪಾತ್ಸ ನಪುಂಸಕಃ ಸ್ಯಾತ್ ॥ ೫೨ ॥

ಅರ್ಥ :- ಯಾವ ಮನುಷ್ಯನು ಅನಂಗಕ್ರೀಡೆ, ನಿಂದನೀಯ ಹಾಸ್ಯದಲ್ಲಿ ಪ್ರೀತಿ, ನಪುಂಸಕರ ನಿಂದೆ ಮತ್ತು ಅತಿಕಾಮಿ, ಕುಶೀಲಸೇವನಾ ತತ್ಪರತೆಯಲ್ಲಿ ಪ್ರಯತ್ನಶೀಲತೆ ಇವೇ ಮೊದಲಾದವುಗಳಲ್ಲಿ ಮನಸ್ಸುಳ್ಳ ಮಾನವನು ಮರಣವನ್ನು ಹೊಂದಿ ಆ ಪಾಪಭಾವನೆಯ ಫಲವಾಗಿ ಮುಂದಿನ ಭವದಲ್ಲಿ ನಪುಂಸಕನಾಗಿಯೇ ಜನಿಸುವನು.

ಭಾವಾರ್ಥ :- ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲದವನಿಗೆ ನಪುಂಸಕನೆಂದು ಹೇಳುತ್ತಾರೆ. ಪುರುಷರೊಡನೆ ರಮಿಸಬೇಕೆಂಬ ಇಚ್ಛೆಯುಳ್ಳವರು ಸ್ತ್ರೀಯರೆಂದೂ, ಸ್ತ್ರೀಯರೊಡನೆ ರಮಿಸಬೇಕೆಂಬ ಅಭಿಲಾಷೆಯುಳ್ಳವರು ಪುರುಷರೆಂದೂ ಮತ್ತು ಪುರುಷರೊಡನೆಯೂ ಮತ್ತೆ ಸ್ತ್ರೀಯರೊಡನೆಯೂ ರಮಿಸಬೇಕೆಂಬ ಇಚ್ಛೆಯುಳ್ಳವರು ನಪುಂಸಕರೆಂದು ತಿಳಿಯಬೇಕು. ಆದಾಗ್ಯು ನಪುಂಸಕರು ನಪುಂಸಕರೇ; ಅವರ ಕಾಮವಾಸನೆಯು ಇಟ್ಟಿಗೆ ಗೂಡಿನ ಅಗ್ನಿಯಂತೆ ಇರುತ್ತದೆ. ಆ ಉಷ್ಣತೆಯು ಬಹುಕಾಲದವರೆಗೆ ಉರಿಯುತ್ತಿರುತ್ತದೆ. ಆದ್ದರಿಂದ ನಪುಂಸಕ ಪರ್ಯಾಯವು ಅತೀ ನಿಂದನೀಯವಾಗಿರುತ್ತದೆ. ಯಾವ ಪುರುಷನು ಕಾಮಸೇವನೆಗೆ ಯೋಗ್ಯವಲ್ಲದ ಅಂಗಗಳಲ್ಲಿ ಕ್ರೀಡಿಸಬೇಕೆಂಬ ವಿಚಾರವೂ, ಕಾಮೋದ್ದೀಪಿತ ನಿಂದನೀಯ ಹಾಸ್ಯ ಅಶ್ಲೀಲ ಕಾರ್ಯಗಳಲ್ಲಿ ಅಭಿರುಚಿಯೂ, ಕಾಮವಾಸನೆಯ ತೀವ್ರ ಪರಿಣಾಮವಿರುವಿಕೆಯೂ, ಸ್ತ್ರೀಯರನ್ನು ವಶಪಡಿಸಿಕೊಳ್ಳುವುದಕ್ಕಾಗಿ ನಾನಾ ವಿಧದಿಂದ ಪ್ರಯತ್ನಿಸುವುದರಲ್ಲಿ ಸ್ತ್ರೀಯರಾಗಲಿ, ಪುರುಷರಾಗಲೀ, ಮರಣವನ್ನು ಹೊಂದಿ ನಿಶ್ಚಯವಾಗಿ ಮರುಭವದಲ್ಲಿ ನಪುಂಸಕರಾಗಿಯೇ ಜನಿಸುವರು. ಆದ್ದರಿಂದ ಭವ್ಯ ಜೀವಗಳು ಈ ನಿಂದನೀಯ ಪರ್ಯಾಯದ ರಕ್ಷಣೆಯಾಗಿ ಸದಾಕಾಲವೂ ತಮ್ಮ ಮನಸ್ಸನ್ನು ಶಾಂತವು, ನಿರ್ವಿಕಾರವಾಗಿಟ್ಟುಕೊಂಡು, ತೀವ್ರ ಕಾಮವಿಕಾರದಿಂದ ದೂರವಿರುವುದಕ್ಕೆ ಪ್ರಯತ್ನಿಸುವುದು ಶಾಂತಿಯ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ವಿಕಲತ್ರಯರಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ನೇ ವದ ದೇವ ! ಕಸ್ಮಾದ್ ।
ಮೃತ್ವೇತಿ ಜೀವೋ ವಿಕಲತ್ರಯಃ ಸ್ಯಾತ್ ॥



ಅರ್ಥ :- ಹೇ ಭಗವಾನ್ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಅಥವಾ ಎಂಥ ಪಾಪಕೃತಿಯನ್ನು ಮಾಡಿರುವುದರ ಫಲವಾಗಿ ವಿಕಲತ್ರಯ ಜೀವಗಳಾಗಿ ಜನಿಸುವುದೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ದುಃಖಂ ಪ್ರದತ್ತಂ ವಿಕಲತ್ರಯಾಣಾಂ ।
ಸುನಿರ್ದಯಾ ತಾಡನ ಮಾರಣಾದಿಃ ॥
ಬಂದೀಕೃತಾ ವಾ ತ್ರಸಜೀವವೃಂದಾಃ ।
ಸ ತೀವ್ರ ಪಾಪಾದ್ವಿಕಲತ್ರಯೀ ಸ್ಯಾತ್ ॥ ೫೩. ॥

ಅರ್ಥ :- ಈ ಪುರುಷ ಪರ್ಯಾಯದಿಂದಲೇ ಅತ್ಯಂತ ನಿಂದನೀಯ ಕಾರ್ಯಗಳು ನಡೆಯುತ್ತವೆ. ವಿಕಲತ್ರಯ ಜೀವಗಳಿಗೆ ದುಃಖವನ್ನೆಸಗುವುದು, ಹೊಡೆಯುವುದು, ನಾನಾ ತ್ರಸಜೀವಗಳನ್ನು ಒಟ್ಟುಗೂಡಿಸಿ ಬಂಧಿಸುತ್ತಾನೆಯೋ, ಅಂತಹ ಮಾನವನು ತನ್ನ ತೀವ್ರ ಪಾಪಕರ್ಮದ ಉದಯದಿಂದ ಸತ್ತು ವಿಕಲತ್ರಯ ಜೀವನಾಗಿಯೇ ಜನಿಸುವನು.

ಭಾವಾರ್ಥ :- ದ್ವೀಂದ್ರಿಯ, ತ್ರೀಂದ್ರಿಯ ಮತ್ತು ಚತುರಿಂದ್ರಿಯ ಜೀವಗಳಿಗೆ ವಿಕಲತ್ರಯಗಳೆಂದು ಹೇಳುತ್ತಾರೆ. ಕ್ರಿಮಿ, ಹೇನು ಮೊದಲಾದವು ಎರಡು ಇಂದ್ರಿಯವುಳ್ಳ ಜೀವಗಳು. ಇರುವೆ, ತಿಗಣೆ ಮೊದಲಾದವು ಮೂರು ಇಂದ್ರಿಯವುಳ್ಳ ಜೀವಗಳು. ನೊಣ, ಸೊಳ್ಳೆ, ಭ್ರಮರ, ಪತಂಗದ ಹುಳು ಮೊದಲಾದವು ಚತುರಿಂದ್ರಿಯ ಜೀವಗಳು. ಈ ಮೂರು ವಿಧವಾದ ಜೀವಗಳು ತ್ರಸಜೀವಗಳಾಗಿರುತ್ತವೆ. ಇವುಗಳಿಗೆ ಎಲ್ಲ ಇಂದ್ರಿಯಗಳಿಲ್ಲದಿರುವುದರಿಂದ ವಿಕಲತ್ರಯಗಳೆಂದು ಹೇಳುತ್ತಾರೆ. ಇವುಗಳಿಗೆ ಪ್ರತಿ ಸಮಯ ಮರಣಭಯವಿರುತ್ತದೆ. ಇಂತಹ ಜೀವಗಳನ್ನು ಪೀಡಿಸುವುದು, ಬಂಧನದಲ್ಲಿಡುವುದು ಮತ್ತೆ ಬೇರೆ ವಿಧವಾಗಿ ದುಃಖವನ್ನೆಸಗುವುದು ಇವೇ ಮೊದಲಾದ ಕ್ರಿಯೆಗಳಿಂದ ತೀವ್ರ ಪಾಪಬಂಧಮಾಡಿಕೊಂಡು ಅದರ ಫಲವಾಗಿ ವಿಕಲತ್ರಯ ಜೀವನಾಗಿಯೇ ಜನಿಸುತ್ತಾನೆ.

ಇನ್ನು ಮುಂದಕ್ಕೆ ದಾಸ (ಸೇವಕ)ನಾಗುವ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾತ್ ।
ದಾಸಃ ಪರೇಷಾಂ ಭವತೀಹ ಜೀವಃ ॥

ಅರ್ಥ :- ಹೇ ದೇವ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಈ ಸಂಸಾರದಲ್ಲಿ ಪರರ ಸೇವಕನಾಗಿ ಸೇವಾವೃತ್ತಿಯನ್ನು ಗೈಯುವನೆಂಬುದನ್ನು ಹೇಳಬೇಕು.

ಉತ್ತರ :- ಯಃ ಕಾರಯಿತ್ವಾ ಸ್ವಗೃಹಾದಿಕಾರ್ಯಂ ।
ದಧಾತಿ ದೀನಾಯ ಧನಾದಿ ವಿತ್ತಮ್ ॥
ಸ್ವಪ್ನೇಽಪಿ ಧೈರ್ಯಂ ಹೃದಧಾನ್ನ ಲೋಭಾತ್ ।
ದಾಸಃ ಪರೇಷಾಂ ಸ ಭವೇದಭಾಗ್ಯಃ ॥ ೫೪ ॥

ಅರ್ಥ :- ಯಾರಾದರು ಅನ್ಯ ದೀನ ಮನುಷ್ಯನಿಂದ ತನ್ನ ಮನೆಯಲ್ಲಿ ಕೆಲಸಕಾರ್ಯಗಳನ್ನು ಮಾಡಿಸಿಕೊಂಡು ಧನಾದಿಗಳನಿತ್ತಿದ್ದು ಮತ್ತೆ ಲೋಭಕ್ಕೆ ವಶೀಭೂತನಾಗಿ ಆತನಿಗೆ ಧೈರ್ಯ ಹೇಳದೆ ಅಧೈರ್ಯನನ್ನಾಗಿ ಮಾಡುವ ಮಾನವನು ಮರಣವನ್ನು ಹೊಂದಿ ಪರಲೋಕದಲ್ಲಿ ಪರರ ದಾಸನಾಗಿಯೇ ಜನಿಸುವನು.

ಭಾವಾರ್ಥ :- ಹೊಟ್ಟೆ ಹಸಿವೆಯಿಂದಲೂ, ಬಾಯಾರಿಕೆಯಿಂದಲೂ ಬಳಲಿದ ದೀನ ದರಿದ್ರರಿಗೆ ಕರುಣಾಪೂರ್ವಕ ಧನ, ಅನ್ನ, ವಸ್ತ್ರಾದಿಗಳನ್ನಿತ್ತು ಸಹಾಯಮಾಡುತ್ತಿರಬೇಕು. ಸಹಾಯಮಾಡುವುದು ಪ್ರತಿಯೊಬ್ಬ ಗೃಹಸ್ಥನ ಕರ್ತವ್ಯವಾಗಿರುತ್ತದೆ. ಆದರೆ ಯಾವ ಪುರುಷನು ಲೋಭ ಕಷಾಯಕ್ಕೆ ವಶೀಭೂತನಾಗಿ ದಾನದ ನೆಪದಿಂದ ಅಲ್ಪ-ಸ್ವಲ್ಪ ಹಣವನ್ನಿತ್ತು, ಅವರಿಂದ ತನ್ನ ಮನೆಯ ಸಕಲ ಕೆಲಸಕಾರ್ಯಗಳನ್ನು ಮಾಡಿಸಿಕೊಂಡು ಅಲ್ಪ ಕೂಲಿಯ ಪ್ರತಿಫಲವಾಗಿ ಅಲ್ಪಹಣವನ್ನೀಯುವ ಮಾನವನು ತನ್ನ ಆಯುಷ್ಯ ಅವಸಾನವಾಗಿ ಮರುಭವದಲ್ಲಿ ಪರರ ದಾಸನಾಗಿ ಕೂಲಿ ಕೆಲಸಗಳನ್ನು ಮಾಡಿ (ಹೊಟ್ಟೆ ಹೊರೆದು) ಜೀವಿಸುವವನಾಗುತ್ತಾನೆ. ಆದ್ದರಿಂದ ಯಾವ ಭವ್ಯಾತ್ಮನು ದಾನವಿತ್ತು ಅವರಿಂದ ಆದರ ಪ್ರತಿಫಲವಾಗಿ ಕೆಲಸಗಳನ್ನು ಮಾಡಿಸಿ ಕೊಳ್ಳಲಾರನು. ದೀನ ದರಿದ್ರರಿಗೆ ಕರುಣಾಪೂರ್ವಕ ಧನಸಹಾಯ ಮಾಡುವುದೇ ಆತ್ಮ ಕಲ್ಯಾಣದ ಸುಲಭೋಪಾಯವಾಗಿರುತ್ತದೆ.



ಇನ್ನು ಮುಂದಕ್ಕೆ ಸ್ತ್ರೀ ಪರ್ಯಾಯ ಪ್ರಾಪ್ತವಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ಪ್ರಾಪ್ನೋತಿ ಜೀವೋ ಲಲನಾ ಶರೀರಂ ॥

ಅರ್ಥ :- ಹೇ ದಯಾಸಾಗರ ! ದಯೆತೋರಿ ಈ ಜೀವನು ಯಾವ ಪಾಪಕರ್ಮದ ಉದಯದಿಂದ ಸ್ತ್ರೀ ಪರ್ಯಾಯವನ್ನು ಪಡೆಯುವ ನೆಂಬುದನ್ನು ಹೇಳಬೇಕು.

ಉತ್ತರ :- ಸ್ತ್ರೀವೇಷಿಜೀವಂ ಪ್ರವಿಲೋಕ್ಯತುಷ್ಯೇತ್ ।
ಕರೋತಿ ನಿತ್ಯಂ ಲಲನಾಭಿಲಾಷಾಮ್ ॥
ಹಾಸ್ಯಂ ಗತಿಂ ದಾರಸಮಂಚ ವಾರ್ತಾಂ ।
ಮೃತ್ವಾ ನರೋಽಯಂ ಲಲನಾಭವೇದ್ಧಿ ॥ ೫೫ ॥

ಅರ್ಥ :- ಯಾರು ಸ್ತ್ರೀವೇಷವನ್ನು ಧರಿಸಿರುವ ಪುರುಷನನ್ನು ಕಂಡು ಸಂತೋಷಪಡುತ್ತಾನೆಯೋ, ಸದಾಕಾಲವೂ ಸ್ತ್ರೀ ಅಭಿಲಾಷೆಯಲ್ಲಿರುವನೋ, ಮತ್ತು ಸ್ತ್ರೀಯಂತೆ ನಗೆ, ನಡತೆ, ಮಾತುಕತೆಗಳಿರುತ್ತವೆಯೋ, ಅವನು ಸತ್ತು ನಿಶ್ಚಯವಾಗಿಯೂ ಸ್ತ್ರೀಯಾಗಿಯೇ ಜನಿಸುವನು.

ಭಾವಾರ್ಥ :- ಈ ಜಗತ್ತಿನಲ್ಲಿ ಕೆಲವು ಜನ ಪುರುಷರು ಸ್ತ್ರೀಯರ ಸಮೀಪದಲ್ಲಿಯೇ ಕುಳಿತುಕೊಳ್ಳುವುದು, ಮಾತನಾಡಿಕೊಂಡಿರುವುದು, ಪುರುಷಪರ್ಯಾಯಕ್ಕಿಂತ ಸ್ತ್ರೀಪರ್ಯಾಯವು ಶ್ರೇಷ್ಠವೆಂದು ತಿಳಿಯುವುದು, ಸ್ತ್ರೀಯರಂತೆ ನಗುವುದು, ನಡೆ-ನುಡಿ, ಹಾವ-ಭಾವ, ವಸ್ತ್ರಧಾರಣೆ, ಆಭರಣಾದಿ ಅಲಂಕಾರ ಮೊದಲಾದವುಗಳನ್ನು ಮಾಡಿಕೊಂಡು ನಟಿಸುವ ಮಾನವನು ಮರಣವನ್ನು ಹೊಂದಿ ತನ್ನ ಪಾಪರೂಪ ಪರಿಣಾಮದಿಂದ ಸ್ತ್ರೀಪರ್ಯಾಯವನ್ನು ಪಡೆಯುವನು. ನಿಜವಾಗಿಯೂ ಸ್ತ್ರೀಪರ್ಯಾಯವು ಮಹಾ ನಿಂದ್ಯವಾದುದೂ, ಸದಾಕಾಲವು ಪರತಂತ್ರತೆಯೂ ಆಗಿರುತ್ತದೆ. ಅಂತಹ ಸ್ತ್ರೀಪರ್ಯಾಯವು ಮಹಾ ಪಾಪಕರ್ಮದ ಉದಯದಿಂದೆಂದು ತಿಳಿಯಬೇಕು.